ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಸತ್ಯಂ

ತಟವರ್ತಿ ವೀರರಾಘವರಾವ್



ಅನುವಾದ : ಉಮಾ ಲೋಕೇಶ್

# ಸತ್ಯಂ

ಮೂಲ : ತಟವರ್ತಿ ವೀರರಾಘವರಾವು
ಕನ್ನಡ ಅನುವಾದ : ಉಮಾ ಲೋಕೇಶ್
ಹೆಚ್. ಎನ್. ಶ್ರೀನಿವಾಸ್

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**SATHYAM**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689, 9886532204**

| | | |
|---|---|---|
| ಮೊದಲನೇ ಮುದ್ರಣ | : | 2023 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 40/– |
| ಪುಟಗಳು | : | v+36=40 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು.

ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್.ಎನ್.ಶ್ರೀನಿವಾಸ**

ಮತ್ತು

**ಎಸ್.ಎನ್.ವಿಜಯಲಕ್ಷ್ಮಿ**

**ಸಂಸ್ಥಾಪಕರು,**

ಶ್ರೀರಾಮಧಾಮ ಧ್ಯಾನಕೇಂದ್ರ

# ವಿಷಯ ಸೂಚಿ


1. ಸತ್ಯ 1

2. ಸತ್ಯ ಎಂದರೆ ದೈವದ ಲಕ್ಷಣಗಳು 8

3. "ಸತ್ಯವನ್ನು ಆಶ್ರಯಿಸಿದರೆ" 14

4. ಸತ್ಯದ ಹಿರಿಮೆ! 15

5. ಶಂಕರಾಚಾರ್ಯರ ಆತ್ಮಬೋಧೆ 21

6. ಸತ್ಯದ ಕುರಿತು ಉಪನಿಷತ್ತಿನಲ್ಲಿನ ವಾಕ್ಯಗಳು 23

7. ಜ್ಞಾನನೇತ್ರ 25

8. ಸತ್ಯವನ್ನು ಹೊಂದಿದರೆ 27

9. ಆತ್ಮ ವಿಚಾರಣೆ 28

10. ಆತ್ಮನಾತ್ಮ ವಿವೇಕ 29

11. ಸದಾನಂದ ಯೋಗಿ ಹೇಳಿದ್ದು.. 31

# ಸತ್ಯ

ಸೃಷ್ಟಿಯಲ್ಲಿ ಸತ್ಯ, ಅಸತ್ಯ ಎರಡೂ ಇದೇ. ಇವುಗಳ ಕುರಿತು ತಿಳಿದುಕೊಳ್ಳಬೇಕು.

ಸತ್ಯವೆಂದರೆ ಏನೆಂದರೆ... ನಿತ್ಯವಾದದ್ದು... ಶಾಶ್ವತವಾದದ್ದು... ಯಾವಾಗಲೂ... ಎಲ್ಲಾ ಕಾಲದಲ್ಲೂ ಇರುವಂತದ್ದು. ಬದಲಾಗದಿರುವುದು... ಅಂದರೆ ಕಾಲ ಬದಲಾದರೂ ಯುಗಗಳು ಬದಲಾದರೂ ಸತ್ಯ ಬದಲಾಗುವುದಿಲ್ಲ.

ಒಂದು ವಿಧವಾಗಿ ಹೇಳಬೇಕೆಂದರೆ, ಸತ್ಯವು ನಿತ್ಯವಾಗಿರಬೇಕು, ಶಾಶ್ವತವಾದದ್ದು ಆಗಿರಬೇಕು, ಯಾವಾಗಲೂ ಇರಬೇಕು, ಬದಲಾಗದೆ ಇರಬೇಕು. ಇನ್ನೂ ಹೇಳಬೇಕೆಂದರೆ, ಕಾಲ ಬದಲಾದರು, ಯುಗಗಳು ಸರಿದರು ಬದಲಾಗದೆ ಇರಬೇಕು. ಇಂತಹ ಲಕ್ಷಣಗಳು ಯಾವುದರಲ್ಲಿ ಇಲ್ಲದಿದ್ದರೂ, ಅದು ಅಸತ್ಯವೇ. ಹಾಗಾದರೆ ಆ ಲಕ್ಷಣಗಳು ಯಾವುದರಲ್ಲಿದೆ ಎಂದರೆ, ಅದು ಒಬ್ಬನೇ..ಭಗವಂತ. ಆತನನ್ನೇ ಆತ್ಮಸ್ವರೂಪ ಎನ್ನುತ್ತಾರೆ. ಭಗವಂತನೇ ಸತ್ಯ ಎಂದು ತಿಳಿದುಕೊಳ್ಳಬೇಕು. ಸೃಷ್ಟಿಯಲ್ಲಿ ಆತ್ಮದ ಹೊರತಾಗಿ ಎಲ್ಲವೂ ಅಸತ್ಯವೇ !

ವೇದಗಳಲ್ಲಿ "ಸತ್ಯಮೇವ ಜಯತೇ" ಎಂದು ಹೇಳಲಾಗಿದೆ. ಅಂದರೆ ಸತ್ಯವೇ ಜಯಿಸುತ್ತದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಆದ್ದರಿಂದ ಮಾನವನು ಯಾವುದರಲ್ಲಿ ವಿಜಯ ಸಾಧಿಸಬೇಕೆಂದರೂ ಅಂದರೆ,ಜಯವನ್ನು ಹೊಂದಬೇಕೆಂದರೂ ಸತ್ಯದಲ್ಲಿ ಜೀವಿಸಬೇಕಾಗಿದೆ.

ಮಾನವರು ಜಯಿಸಬೇಕಾದದ್ದು ತುಂಬಾ ಇದೆ... ದುಃಖವನ್ನು ಜಯಿಸಬೇಕು. ಅಶಾಂತಿಯನ್ನು ಜಯಿಸಬೇಕು, ಬಾಧೆಗಳನ್ನು ಜಯಿಸಬೇಕು, ಕಷ್ಟಗಳನ್ನು ಸಮಸ್ಯೆಗಳನ್ನು ಜಯಿಸಬೇಕು.

ಇವೆಲ್ಲವೂ ಸತ್ಯವನ್ನು ಆಶ್ರಯಿಸಿದವರು, ಸತ್ಯವನ್ನು ಮಾತನಾಡುವವರು, ಸತ್ಯದಲ್ಲಿ ಜೀವಿಸುವವರೇ ಸಾಧಿಸಬಲ್ಲರು.

ಆಸತ್ಯವನ್ನು ಆಶ್ರಯಿಸಿದರು ಅಸತ್ಯದಲ್ಲಿ ಜೀವಿಸಿದರು, ಅಸತ್ಯ ಮಾತನಾಡಿದರು ಅವರಿಗೆ ಎಲ್ಲವೂ ಅಪಜಯಗಳೇ! ಅಂದರೆ ಅವರಿಗೆ ಕಷ್ಟಗಳು ನಷ್ಟಗಳು, ದುಃಖಗಳು ರೋಗಗಳು, ಅಶಾಂತಿ, ಬಾದೆಗಳು ಎಲ್ಲವೂ ಇರುತ್ತದೆ ಎಂದು ತಿಳಿದುಕೊಳ್ಳಿ.

ಹಾಗಾದರೆ ಅಸತ್ಯ ಎಂದರೆ ಏನು? ಅದನ್ನು ತಿಳಿದುಕೊಳ್ಳಬೇಕೆಂದರೆ ಮೊದಲು ಸತ್ಯ ಎಂದರೆ ಏನು ಎಂದು ತಿಳಿದುಕೊಳ್ಳಬೇಕು. ಸತ್ಯ ಎಂದರೆ ಸಾಕ್ಷಾತ್ ಭಗವಂತ ಎಂದು ತಿಳಿಕೊಂಡಿದ್ದೇವೆ. ಆತನನ್ನು ಆತ್ಮ ಎಂದು ಹೇಳುತ್ತಾರೆ. ಆತ್ಮವೇ ಸತ್ಯ ಭಗವಂತನೇ ಸತ್ಯ. ಆತನನ್ನು ಹಿಂದೂ ಮತದಲ್ಲಿ ಪರಬ್ರಹ್ಮ ಎಂದು.. ಮುಸ್ಲಿಮರು ಅಲ್ಲಾ ಎಂದು.. ಕ್ರಿಶ್ಚಿಯನ್ಸ್ ' ತಂದೆ 'ಎಂದು ಹೇಳುತ್ತಾರೆ.

ಆದಿ ಶಂಕರಾಚಾರ್ಯರು "ಬ್ರಹ್ಮ ಸತ್ಯ ಜಗತ್ ಮಿಥ್ಯ " ಎಂದು ಹೇಳಿದ್ದಾರೆ . ಅವರ ಹೇಳಿಕೆಯ ಅನುಸಾರ ಭಗವಂತ ಒಬ್ಬನೇ ಶಾಶ್ವತವಾದವನು ಉಳಿದವೆಲ್ಲವೂ ಜಗತ್ತಿನಲ್ಲಿ ಅಶಾಶ್ವತವಾದದ್ದು. ಅಂದರೆ ಅದೃಶ್ಯ ವಾಗುವಂತದ್ದು ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಆತ್ಮ ಹೊರತು ಎಲ್ಲವೂ ಅಸತ್ಯಗಳೇ ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಆದ್ದರಿಂದ ತಿಳಿಕೊಳ್ಳಬೇಕಾದ ವಿಷಯವೇನೆಂದರೆ, ಆತ್ಮ ಹೊರತು ಯಾವುದು ಆಶಯಿಸಿದರು ಅಸತ್ಯವನ್ನು ಆಶಯಿಸಿದಂತೆ. ಒಂದು ರೀತಿಯಲ್ಲಿ ಹೇಳಬೇಕೆಂದರೆ ರೂಪ ಹೊಂದಿರುವ ಎಲ್ಲವೂ ಈ ಕಣ್ಣಿಗೆ ಕಾಣಿಸುವುದೆಲ್ಲವೂ ಅಸತ್ಯಗಳೇ ಇನ್ನೂ ಹೇಳಬೇಕೆಂದರೆ ಸತ್ಯವೂ ಸೃಷ್ಟಿಸಲ್ಪಟ್ಟಿದೆ. ಅಂತ್ಯವಿಲ್ಲದ್ದು ಅಂದರೆ ಸತ್ಯಕ್ಕೆ ಹುಟ್ಟು ಇಲ್ಲ ಸಾವು ಇಲ್ಲ.

ಪ್ರಪಂಚದಲ್ಲಿ ಎಲ್ಲಿ ನೋಡಿದರೂ ದುಃಖ, ಅಶಾಂತಿ, ಬಾಧೆ, ಕಷ್ಟ ತಾಂಡವವಾಡುತ್ತಿದೆ. ಇಡೀ ಪ್ರಪಂಚವನ್ನು ಗಮನಿಸಿದರೆ, ಇದು ಅರ್ಥವಾಗುತ್ತದೆ. ಪ್ರತಿಯೊಬ್ಬರಿಗೂ ಯಾವುದೋ ಒಂದು ವಿಧವಾಗಿ ದುಃಖವಿದೆ. "ಯಾವ ಸಮಸ್ಯೆಯಿಂದ ಭಾದೆಯುಂಟಾದರೂ,ಅದನ್ನು ದುಃಖವೆಂದು ಹೇಳುತ್ತಾರೆ."

ಗಮನಿಸಿದರೆ, ಮಾನವರಿಗೆ ಅನೇಕ ವಿಧವಾದ ಸಮಸ್ಯೆಗಳು ಇವೆ.

1. ಆರೋಗ್ಯ ಸಮಸ್ಯೆಗಳು:– ಇವು ಕೆಲವು ನೂರುಗಳೇ ಅಲ್ಲ, ಸಾವಿರಕ್ಕೆ ಮಿಗಿಲಾಗಿ ಇರುತ್ತದೆ.

2. ಆರ್ಥಿಕ ಸಮಸ್ಯೆಗಳು:– ಇವು ಕೂಡ ನೂರಾರು ವಿಧಗಳು ಇದೆ

3. ಕುಟುಂಬ ಸಮಸ್ಯೆಗಳು:– ಅಂದರೆ ಕುಟುಂಬದಲ್ಲಿರುವವರು, ಹಾಗೂ ಬಂಧುಗಳ ಮಧ್ಯೆ ಇರುವಂತಹ ಸಮಸ್ಯೆಗಳು.

4. ಸಂಸಾರ ಸಮಸ್ಯೆಗಳು:– ಅಂದರೆ ಗಂಡ ಹೆಂಡತಿ ಮಧ್ಯೆ ಇರುವ ಸಮಸ್ಯೆಗಳು.

5. ನೆರೆಹೊರೆಯವರ ಮಧ್ಯೆ ಇರುವ ಸಮಸ್ಯೆಗಳು

6. ವೃದ್ಯಾಪ್ಯದ ಸಮಸ್ಯೆಗಳು :– ಮುದಿತನದಲ್ಲಿ ಬರುವ ಸಮಸ್ಯೆಗಳು.

7. ಮರಣಾನಂತರ ಜೀವನ ಸಮಸ್ಯೆಗಳು.

ಮಾನವರು ಇಂತಹ ಸಮಸ್ಯೆಗಳಿಂದ ತೊಂದರೆ ಅನುಭವಿಸಲು ಕಾರಣ? ಎಲ್ಲರೂ ಅಸತ್ಯದಲ್ಲಿ ಜೀವಿಸುತ್ತಿರುವುದೇ ಆಗಿದೆ. ಅಸತ್ಯವನ್ನು ಆಶ್ರಯಿಸುತ್ತಿದ್ದಾರೆ, ಅಸತ್ಯದ ಮೇಲೆಯೇ ಹೆಚ್ಚಾಗಿ ಮೋಜು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಅಸತ್ಯವೇ ಸರಿಯಾದದ್ದು ಎಂದು ಕೊಳ್ಳುತ್ತಿದ್ದಾರೆ. ಅಸತ್ಯವನ್ನೇ ಹಿಂಬಾಲಿಸುತ್ತಿದ್ದಾರೆ. ಒಂದು ತಿಳಿದುಕೊಳ್ಳಿ, ಅಸತ್ಯದ ಹಿಂದೆ ಹೋದ ಎಲ್ಲರ ಪಾಡು ಅಷ್ಟೇ... ಎಷ್ಟು ದೇವರನ್ನು ಆಶ್ರಯಿಸಿದರು, ಎಷ್ಟು ತೀರ್ಥ ಯಾತ್ರೆಗಳು ಮಾಡಿದರೂ, ಎಷ್ಟು ಜನ ಗುರುಗಳನ್ನು, ಸ್ವಾಮೀಜಿಗಳನ್ನು, ಬಾಬಾಗಳನ್ನು ಆಶ್ರಯಿಸಿದರೂ ದುಃಖದಿಂದ ಹೊರಬರಲು ಸಾಧ್ಯವಿಲ್ಲ.

ಲೋಕದ ಜನರು ಅಸತ್ಯವನ್ನು ಆಶ್ರಯಿಸುತ್ತಿದ್ದಾರೆ. ಅಂದರೆ, ಅಸತ್ಯವಾದ ವಿಗ್ರಹಗಳನ್ನು, ಫೋಟೋಗಳನ್ನು, ಪ್ರತಿಮೆಗಳನ್ನು ಆರಾಧಿಸುತ್ತಿದ್ದಾರೆ. ಅಸತ್ಯವೆಂದರೆ, ಒಮ್ಮೆ ಇದ್ದು ಮತ್ತೊಮ್ಮೆ ಇಲ್ಲವಾಗುವುದು, ಬದಲಾಗುವುದು, ಶಾಶ್ವತವಲ್ಲದಿರುವುದು.

ಒಂದು ವಿಧವಾಗಿ ಹೇಳಬೇಕೆಂದರೆ ವಿಗ್ರಹಗಳನ್ನು ಆರಾಧಿಸುವರೆಲ್ಲರೂ ಅಸತ್ಯವನ್ನು ಆರಾಧಿಸುತ್ತಿರುವಂತೆ ಆಗಿದೆ. ಆದ್ದರಿಂದಲೇ ಚಿಕ್ಕಂದಿನಿಂದಲೂ ಪೂಜೆಗಳನ್ನು ಮಾಡುತ್ತಿದ್ದರೂ, ದುಃಖದಲ್ಲಿ ಅಂದರೆ ಸಮಸ್ಯೆಗಳಲ್ಲಿಯೇ ಇದ್ದಾರೆ. ಕಾರಣ ಅವರಿಗೆ ಆತ್ಮವೆ ಸತ್ಯ ಎನ್ನುವುದು ತಿಳಿದಿಲ್ಲ.

ಜನರು ಪೂಜೆ ಮಾಡಿದರೆ ಮಾತ್ರ ಪುಣ್ಯ ಬರುತ್ತದೆ ಎಂದುಕೊಳ್ಳುತ್ತಾರೆ. ಆದರೆ ದೈವವನ್ನಲ್ಲದೆ ಅಂದರೆ, ಆತ್ಮವನ್ನು ಅಲ್ಲದೇ ಅಸತ್ಯವನ್ನು ಆರಾಧಿಸಿದರೆ, ಪುಣ್ಯ ಹೇಗೆ ಬರುತ್ತದೆ? ಇದನ್ನು ಎಷ್ಟು ಹೇಳಿದರೂ ಅರ್ಥವಾಗುತ್ತಿಲ್ಲ.

ಪತ್ರೀಜಿ ಪಿರಮಿಡ್ ಧ್ಯಾನಿಗಳಿಗೆ 18 ಆದರ್ಶ ಸೂತ್ರಗಳಲ್ಲಿ "ಅಸತ್ಯವಾದ ವಿಗ್ರಹರಾಧನೆ ಬೇಡ ಸತ್ಯವಾದ ಆತ್ಮವನ್ನೇ ಆರಾಧಿಸಬೇಕು" ಎಂದಿದ್ದಾರೆ. ಕಾರಣ ಸತ್ಯವೇ ಭಗವಂತ... ಆದ್ದರಿಂದ ಆತ್ಮವೆನ್ನುವ ಭಗವಂತನನ್ನೇ ಆಶ್ರಯಿಸಬೇಕು. ಧ್ಯಾನ ಮಾಡಬೇಕು ಎಂದು ಪತ್ರೀಜಿಯವರು ಹೇಳಿದ್ದಾರೆ.

ಕಾರಣ,ಭಗವಂತನೇ ಆತ್ಮವೆಂದು ಭಗವದ್ಗೀತೆಯಲ್ಲಿ 10 ನೆಯ ಅಧ್ಯಾಯ 20ನೆಯ ಶ್ಲೋಕದಲ್ಲಿ ಸಾಕ್ಷಾತ್ ಶ್ರೀಕೃಷ್ಣನೇ ಸ್ಪಷ್ಟವಾಗಿ ಹೇಳಿದ್ದಾನೆ.

**ಶ್ಲೋಕ ॥ ಅಹಮಾತ್ಮ ಗುಡಾಕೇಶ ಸರ್ವಭೂತಾಶಯ ಸ್ಥಿತ:**
**ಅಹಮಾಧಿಶ್ಚ ಮಧ್ಯಂ ಚ ಭೂತಾನಾಮಸ್ತ ಏವಚ**

**(ಭ.ಗೀ.10–20)**

ತಾ :–ಓ ಅರ್ಜುನ ಸರ್ವ ಪ್ರಾಣಿಗಳಲ್ಲಿ ಸ್ಥಿತವಾಗಿರುವ ಆತ್ಮನು ನಾನೇ ಆಗಿದ್ದೇನೆ ಹಾಗೂ ಪ್ರಾಣಿಗಳ ಆದಿ ಮಧ್ಯಾಂತಗಳು ನಾನೇ ಆಗಿದ್ದೇನೆ.

ಶ್ರೀ ಕೃಷ್ಣ ಭಗವಾನರು ಸ್ವಯಂ ಹೇಳಿದ ಈ ಶ್ಲೋಕದ ಅನುಸಾರ ವ್ಯಕ್ತಿ ಆತ್ಮವೇ ದೇವರೆಂದು, ಆತ ಸಮಸ್ತ ಪ್ರಾಣಿಗಳ ಶರೀರಗಳಲ್ಲಿ ಇದ್ದಾನೆ ಎಂದು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಆದ್ದರಿಂದ ಸತ್ಯವನ್ನೇ ಆರಾಧಿಸಬೇಕು. ಅಂದರೆ ಆತ್ಮವನ್ನು ಆರಾಧಿಸಬೇಕು ಹಾಗೂ ಶರೀರದಲ್ಲಿರುವ ಆತ್ಮವನ್ನು ಆಶ್ರಯಿಸಬೇಕೆಂದರೆ ಶರೀರದ ಒಳಗೆ ಹೋಗಬೇಕು ಎಂದರೆ ಒಂದೇ ಮಾರ್ಗ ಅದೇ ಪತ್ರೀಜಿಯವರು ಹೇಳಿದ "ಶ್ವಾಸದ ಮೇಲೆ ಗಮನ" ಧ್ಯಾನ.

ಭಗವದ್ಗೀತೆಯಲ್ಲಿ ನಾನು ಆತ್ಮ ಎಂದು ಶ್ರೀ ಕೃಷ್ಣಭಗವಾನ್ ಸ್ಪಷ್ಟವಾಗಿ ಹೇಳಿದ್ದಾನೆ ಅಲ್ಲವೇ. ಆದ್ದರಿಂದ ಅಸತ್ಯವನ್ನು ಬಿಟ್ಟು ಸತ್ಯವನ್ನು ತಿಳಿದುಕೊಂಡವನೇ ದೊಡ್ಡವನು ಅಷ್ಟೇ ಅಲ್ಲದೇ ಪೂಜೆಗಳು ಮಾಡುತ್ತಾ ಧ್ಯಾನ ಮಾಡುವವನು ಕೂಡ ದೊಡ್ಡವನಲ್ಲ ಅವರು ಉನ್ನತ ಸ್ಥಿತಿಗೆ ಹೋಗುವುದಿಲ್ಲ ಕಾರಣ ಅವರು ಇನ್ನೂ ಅಸತ್ಯವನ್ನು ಬಿಟ್ಟಿಲ್ಲ, ಸತ್ಯವನ್ನು ನಂಬಿಲ್ಲ ಎಂದು ಅರ್ಥ.

ಭಗವದ್ಗೀತೆಯಲ್ಲಿ ಸತ್ಯವನ್ನೇ ಆಶ್ರಯಿಸಿ ಎಂದು ಹೇಳಲಾಗಿದೆ. ಆದ್ದರಿಂದ ಯಾರು ಆತ್ಮವನ್ನು ಆಚರಿಸುತ್ತಾರೋ ಅವರು ಸಾಕ್ಷಾತ್ ಭಗವಂತನನ್ನೆ ಆಶ್ರಯಿಸಿದವರಾಗುತ್ತಾರೆ. ಅವರು ಭಗವಂತನನ್ನು ಹೊಂದುತ್ತಾರೆ ದುಃಖದಿಂದ ಶಾಶ್ವತವಾಗಿ ಹೊರಬರುತ್ತಾರೆ. ಆ ವಿಷಯವೇ ಈ ಕೆಳಗಿನ ಶ್ಲೋಕಗಳಲ್ಲಿ ಹೇಳಲಾಗಿದೆ.

**ಶ್ಲೋ ॥ ಯೇ ತ್ಯಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ**
**ಸರ್ವತ್ರಗಮಚಿನತ್ಯಂ ಚ ಕೂಟಸ್ಥಮಚಲಂ ಧ್ರುವಂ ॥(ಭ. ಗೀ.12–3)**

**ಶ್ಲೋ ॥ ನಂ ನಿಯಮ್ಯೇ ನಿಂದ್ರಿಯಗ್ರಾಮಂ ಸರ್ವತ್ರ ಸಮಾಬುದ್ಧಯ: ।**
**ತೇ ಪ್ರಾಪ್ನುವನ್ತಿ ಮಾಮೇವ ಸರ್ವ ಭೂತಹಿತೇ ರತಃ ॥ (ಭ. ಗೀ.12–4)**

ತಾ:–– ಯಾರು ಇಂದ್ರಿಯಗಳನ್ನು ಸ್ವಾಧೀನ ಪಡಿಸಿಕೊಂಡು, ಎಲ್ಲೆಡೆಯಲ್ಲಿಯೂ ಸಮ ಭಾವವುಳ್ಳವರಾಗಿ, ಸಮಸ್ತ ಪ್ರಾಣಿಗಳಿಗೂ ಹಿತವನ್ನು ಬಯಸುವ ಆಸಕ್ತಿಯುಳ್ಳವರಾಗಿ, ನಿರ್ದೇಶಿಸಲು ಶಕ್ಯವಲ್ಲದ, ಇಂದ್ರಿಯಗಳಿಗೆ ಗೋಚರವಾಗದಿರುವ, ಇಂತಹುದನ್ನು ಊಹಿಸಲು ಸಾಧ್ಯವಾಗದಿರುವುದು, ನಿರ್ವಿಕಾರವಾದದ್ದು, ಚಂಚಲವಲ್ಲದ್ದು, ನಿತ್ಯವಾದದ್ದು, ಎಲ್ಲಾ ಕಡೆ ವ್ಯಾಪಿಸಲು ತಕ್ಕದಾದ ಅಕ್ಷರ ಪರಬ್ರಹ್ಮನನ್ನು ಅಂದರೆ, ಆತ್ಮನನ್ನು ಯಾರು ಧ್ಯಾನಿಸುತ್ತಿದ್ದಾರೋ! ಅವರು ನನ್ನನ್ನು ಹೊಂದುತ್ತಿದ್ದಾರೆ.

ಶ್ರೀ ಕೃಷ್ಣ ಹೇಳಿದಂತೆ ಇಂದ್ರಿಯಗಳನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದರೆ? ಮೊದಲು ಕಣ್ಣು ಮುಚ್ಚಬೇಕು, ಕೈಗಳನ್ನು ಪರಸ್ಪರ ಜೋಡಿಸಿಕೊಳ್ಳಬೇಕು,

ಕಾಲುಗಳನ್ನು ಮಡಚಿಕೊಳ್ಳಬೇಕು. ಆಲೋಚನೆಗಳು ಬಂದರೆ, ಮಧ್ಯದಲ್ಲಿಯೇ ಕಟ್ ಮಾಡಿ ಶ್ವಾಸವನ್ನು ಗಮನಿಸಬೇಕು. ಸ್ವಲ್ಪ ಹೊತ್ತಿಗೆ ಆಲೋಚನೆಗಳು ಕೂಡಾ ಕಡಿಮೆ ಆಗುತ್ತದೆ.. ಆಗ ಮನಸ್ಸು ಕೆಲಸ ಮಾಡುವುದಿಲ್ಲ.ಆಗ ಅವರು ಶ್ರೀ ಕೃಷ್ಣನು ಹೇಳಿದಂತೆ ಇಂದ್ರಿಯಗಳನ್ನು ಸ್ವಾಧೀನ ಪಡಿಸಿಕೊಂಡವರಾಗುತ್ತಾರೆ.

ಶ್ರೀ ಕೃಷ್ಣನು ಇನ್ನೂ ಏನು ಹೇಳಿದ್ದಾನೆಂದರೆ? ಸೃಷ್ಟಿಯಲ್ಲಿ ಎಲ್ಲರ ಬಗ್ಗೆ ಸಮಭಾವ ಹೊಂದಿರಬೇಕು. ಎಲ್ಲರೂ ಒಂದೇ ಎನ್ನುವ ತತ್ವ ಇರಬೇಕು ಮಾನವರೊಂದಿಗೆ, ಇತರ ಪ್ರಾಣಿ ಕೋಟಿಗಳು ಕೂಡಾ ಒಂದೇ..ಬೇರೆ ಬೇರೆ ಅಲ್ಲ ಎನ್ನುವ ಭಾವ ಹೊಂದಿರಬೇಕು. ಸಮಸ್ತ ಪ್ರಾಣಿಗಳಿಗೆ ಒಳಿತನ್ನು ಮಾಡುವ ಆಸಕ್ತಿ ಇರಬೇಕು. ಅಂದರೆ ಎಲ್ಲಾ ವಿಧವಾದ ಪ್ರಾಣಿಗಳು, ಪಕ್ಷಿಗಳು, ಜಲಚರಗಳನ್ನು ಹಿಂಸಿಸದೆ, ಕೊಲ್ಲದೆ ರಕ್ಷಿಸಬೇಕು ಎಂದು ಹೇಳುತ್ತಾರೆ.

ಹಾಗೆ ಜೀವಿಸುತ್ತಾ ಮಾನವ ಇಂದ್ರಿಯಗಳಿಗೆ ಕಾಣಿಸದ, ಮಾನವನು ಊಹಿಸಲಾರದ, ಆಕಾರವಿಲ್ಲದ, ಚಲಿಸದ ನಿತ್ಯವಾದ ಅಂದರೆ ಯಾವಾಗಲೂ ಇರುವ ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವ ಸಮಸ್ತ ಸೃಷ್ಟಿಯಲ್ಲಿ ವ್ಯಾಪಿಸಿರುವ "ಅಕ್ಷರ ಪರಬ್ರಹ್ಮ" ಅಂದರೆ, ನಾಶನವಿಲ್ಲದ, ಕಾಣದ, ಎಲ್ಲಕ್ಕಿಂತಲೂ ಉನ್ನತವಾದ ಭಗವಂತನನ್ನು ಅಂದರೆ ಆತ್ಮವನ್ನು ಯಾರು ಧ್ಯಾನಿಸುತ್ತಾರೋ ಅವರು ನನ್ನನ್ನು ಹೊಂದುತ್ತಾರೆಂದು ಶ್ರೀ ಕೃಷ್ಣಪರಮಾತ್ಮ ಹೇಳಿದ್ದಾರೆ.

ಇಲ್ಲಿ ನಾವು ತಿಳಿದುಕೊಳ್ಳಬೇಕಾದದ್ದು ಏನೆಂದರೆ? ಭಗವಂತನನ್ನು ಅಂದರೆ ಸತ್ಯವನ್ನು ಹೊಂದುವುದು ಅಷ್ಟು ಸುಲಭವಾದ, ಸಾಮಾನ್ಯವಾದ ವಿಷಯವಲ್ಲ ಆದರೆ ಧ್ಯಾನ ಮಾಡಿದರೆ ಅದು ಸಾಧ್ಯವಾಗುತ್ತದೆ ಅಂತಹವರು ಸಮಸ್ತ ದುಃಖಗಳಿಂದ ಶಾಶ್ವತವಾಗಿ ಹೊರ ಬರುತ್ತಾರೆ ಅದಕ್ಕೆ ಪತ್ರೀಜಿಯವರು ಸತ್ಯಾರಾದನೆ ಮಾಡಬೇಕು ಎಂದಿದ್ದಾರೆ. ಹಾಗೆ ಸತ್ಯ ಸಾಯಿ ಬಾಬಾ ಪಂಚ ಶೀಲಗಳನ್ನು ಬೋಧಿಸಿದ್ದಾರೆ. ಅದೇ 1.ಸತ್ಯ 2.ಧರ್ಮ 3.ಹಿಂಸೆ 4.ಪ್ರೇಮ 5.ಶಾಂತಿ ನೋಡಿ ಅವರು ಪ್ರಪ್ರಥಮವಾಗಿ ಸತ್ಯದ ಕುರಿತಾಗಿಯೇ ಹೇಳಿದ್ದಾರೆ.

ಸತ್ಯವನ್ನು ಹಿಂದೂ ಧರ್ಮದಲ್ಲಿ 'ಪರಮಾತ್ಮ' 'ಪರಬ್ರಹ್ಮ' 'ಭಗವಂತ' 'ಸೃಷ್ಟಿಕರ್ತ' 'ವಿಶ್ವಾತ್ಮ' 'ಪರಮೇಶ್ವರ' 'ಲಲಿತಾ ದೇವಿ' 'ಆದಿಶಕ್ತಿ' ಎಂದು

ವಿಧವಿಧವಾದ ಹೆಸರುಗಳೊಂದಿಗೆ ಕರೆಯುತ್ತಾರೆ. ಮುಸ್ಲಿಂಗಳು 'ಅಲ್ಲಾ' ಎನ್ನುತ್ತಾರೆ. 'ಕ್ರಿಶ್ಚಿಯನ್ಸ್' ತಂದೆ ಎನ್ನುತ್ತಾರೆ.

ಪತ್ರೀಜಿಯವರು ಕೂಡ ಅಂತಹ ಸತ್ಯವನ್ನು ಆಶ್ರಯಿಸಲು ಹೇಳುತ್ತಿದ್ದಾರೆ. ಸತ್ಯವನ್ನು ಆರಾಧಿಸಲು ಹೇಳಿದ್ದಾರೆ. ಅವರ 18 ಆದರ್ಶ ಸೂತ್ರಗಳಲ್ಲಿ 14 ನೆಯ ಸೂತ್ರ "ವಿಗ್ರಹಾರಾಧನೆ ಬೇಡ, ಸತ್ಯಾರಾದನೆ ಮಾಡಬೇಕು" ಎಂದು ಹೇಳಿದ್ದಾರೆ. ಅಂತಹ ಸತ್ಯ ಯಾರಿಗೆ ಅರ್ಥವಾಗುತ್ತದೆ? ಎಂದರೆ ಸತ್ಯವನ್ನು ಆಶ್ರಯಿಸಿದವರಿಗೆ ಹೊರತು, ಸತ್ಯವನ್ನು ಆಶ್ರಯಿಸದವರಿಗೆ ಅರ್ಥವಾಗುವುದಿಲ್ಲ.

ವೇದಗಳಲ್ಲಿ "ಸತ್ಯಮೇವ ಜಯತೆ" ಎಂದು ಹೇಳಲಾಗಿದೆ. ಅಂದರೆ ಸತ್ಯವೇ ಜಯಿಸುತ್ತದೆ... ನೀವು ಸತ್ಯವನ್ನು ಆಶ್ರಯಿಸಿದರೆ, ಸತ್ಯದಲ್ಲಿ ಜೀವಿಸಿದರೆ, ಜೀವನದಲ್ಲಿ ಎಲ್ಲಾ ವಿಷಯಗಳಲ್ಲಿ ಜಯವನ್ನು ಹೊಂದುವಿರಿ ಹಾಗಾದರೆ ಜೀವನದಲ್ಲಿ ಯಾರು ವಿಜಯ ಸಾಧಿಸಿದಂತೆ.? ಎಂದರೆ ಯಾರು ದುಃಖದಿಂದ ಶಾಶ್ವತವಾಗಿ ಹೊರ ಬರುತ್ತಾರೋ ಅವರೇ ವಿಜಯ ಹೊಂದಿದಂತೆ, ಅದನ್ನೇ ದೊಡ್ಡವರು "ಮೋಕ್ಷ" ಎಂದು ಹೇಳುತ್ತಾರೆ. ಮೋಕ್ಷ ಎನ್ನುವುದು ಸತ್ಯವನ್ನು ಆಶ್ರಯಿಸುವುದರಿಂದ ಬರುತ್ತದೆ.

ಸೃಷ್ಟಿಯಲ್ಲಿ, ವೃಕ್ಷ ಜಾತಿ, ಕ್ರೀಮಿಕೀಟ, ಸರ್ಪಜಾತಿ, ಪಕ್ಷಿ ಜಾತಿ, ಮಾನವ ಜಾತಿ, ಪ್ರಾಣಿ ಜಾತಿ, ಸೂರ್ಯ, ಚಂದ್ರ ನವಗ್ರಹಗಳು ಹೀಗೆ ನೋಡಿದರೆ ಎಷ್ಟೋ ಇವೆ. ಇವುಗಳಲ್ಲಿ ಯಾವುದಕ್ಕಾದರೂ ಆತ್ಮಕ್ಕೆ ಅಂದರೆ ಸತ್ಯಕ್ಕೆ ಇರುವ ಲಕ್ಷಣಗಳು ಇರುವುದೇ? ಎಂದರೆ ಇಲ್ಲ ಎಂದು ತಿಳಿಯುತ್ತದೆ. ಕಾರಣ ಸೃಷ್ಟಿಸಲ್ಪಟ್ಟಿರುವುದೆಲ್ಲ ಅದೃಶ್ಯವಾಗುವುದು, ಅಂತ್ಯಾವಾಗುವುದು ಆದ್ದರಿಂದ ಸೃಷ್ಟಿಸಿರುವುದು ಯಾವುದೂ ಸತ್ಯವಲ್ಲ ಎಂದು ತಿಳಿಯುತ್ತದೆ. ಕಾರಣ ಅವು ಅಂತ್ಯವಾಗುವುದು.. ಅದೃಶ್ಯವಾಗುವುದು. ಆದ್ದರಿಂದ ಸೃಷ್ಟಿಸದಿರುವುದೇ ಸತ್ಯ, ಅಂತ್ಯವಾಗದಿರುವುದೇ ಸತ್ಯ, ಅದೇ ಭಗವಂತ, ಆತನೇ ಭಗವಂತ, ಪರಬ್ರಹ್ಮ, ಆತನನ್ನೇ ಆತ್ಮ ಎಂದು ಹೇಳುತ್ತಾರೆ. ಪತ್ರೀಜಿ ಒಂದು ಸಂಧರ್ಭದಲ್ಲಿ ಏನು ಹೇಳಿದ್ದಾರೆಂದರೆ, ಪ್ರತಿಯೊಬ್ಬರೂ ನಾರಾಯಣರಾಗಬೇಕು... ಅಂತಹವರಿಗೆ ಲಕ್ಷ್ಮಿ ದೇವಿ ಅನುಗ್ರಹ ಉಂಟಾಗುತ್ತದೆ ಎನ್ನುತ್ತಾರೆ. ಅಂದರೆ ಭೋಗ ಹೊಂದುತ್ತಾರೆ, ಸುಖವಾಗಿ ಜೀವಿಸುತ್ತಾರೆ ಎಂದು ಹೇಳಿದ್ದಾರೆ ನಾರಾಯಣನಾಗಬೇಕು ಎಂದರೆ ಆತ್ಮವನ್ನು, ಸತ್ಯವನ್ನು ಆಶ್ರಯಿಸಬೇಕು. ಅಂದರೆ ಧ್ಯಾನ ಮಾಡಬೇಕು ಎಂದು ಹೇಳಿದ್ದಾರೆ.

# ಸತ್ಯ ಎಂದರೆ ದೈವದ ಲಕ್ಷಣಗಳು

1. ಸರ್ವವ್ಯಾಪಿ :–ಸಕಲ ಚರಾಚರ ಸೃಷ್ಟಿಯಲ್ಲೆಲ್ಲಾ ವ್ಯಾಪಿಸಿರುವವನು.
2. ಸ್ಥಾನವಿಶೇಷ ಇಲ್ಲದವನು:– ಒಂದೇ ಕಡೆ ಇರುವವನಲ್ಲ
3. ಸರ್ವಾಂತರ್ಯಾಮಿ:–ಸರ್ವ ಜೀವಿಗಳಲ್ಲಿ ಅಂತರ್ಯಾಮಿಯಾಗಿ ಇರುವವನು.
4. ನಿರಾಕಾರನು :–ಆಕಾರ ಇಲ್ಲದವನು.
5. ಅವ್ಯಕ್ತನು :– ವ್ಯಕ್ತವಾಗದವನು, ಕಾಣದೇ ಇರುವವನು
6. ನಾಮರಹಿತನು:–ಹೆಸರು ಇಲ್ಲದವನು
7. ರೂಪರಹಿತನು:–ರೂಪವಿಲ್ಲದವನು
8. ವಿದೇಹನು:– ದೇಹವಿಲ್ಲದವನು, ಕೈಕಾಲುಗಳು ಇಲ್ಲದವನು, ವಸ್ತ್ರ, ಭೂಷಣಗಳು ಇಲ್ಲದವನು.
9. ಶ್ರವಣ ಹೀನನು :– ಕಿವಿಗಳು ಇಲ್ಲದವನು, ನೇತ್ರಗಳು ಇಲ್ಲದವನು, ಗೋತ್ರವಿಲ್ಲದವನು.
10. ಸ್ವಯಂ ಸಿದ್ಧನು :– ಬಾಲ್ಯ, ಯೌವ್ವನ, ವಾರ್ಧಕ್ಯಗಳೊಂದಿಗೆ ಸಂಬಂಧವಿಲ್ಲದವನು.
11. ದರ್ಶಿಸಲಾರಾದವನು:–ಭೌತಿಕವಾದ ಕಣ್ಣುಗಳೊಂದಿಗೆ ನೋಡಲಾರದವನು.
12. ಇಂದ್ರಿಯಾತೀತನು:– ಇಂದ್ರಿಯಗಳಿಗೆ ಅತೀತವಾದವನು. ಮಾನವ ಇಂದ್ರಿಯಗಳೊಂದಿಗೆ ತಿಳಿದುಕೊಳ್ಳಲಾರದವನು. ಅಂದರೆ ಜ್ಞಾನೇಂದ್ರಿಯಗಳೊಂದಿಗೆ ಆಗಲಿ, ಕರ್ಮೇಂದ್ರಿಯಗಳೊಂದಿಗೆ ಆಗಲಿ, ಕೊನೆಗೆ ಮನಸ್ಸಿನೊಂದಿಗೆ ಆಗಲಿ ತಿಳಿದುಕೊಳ್ಳದವನು.
13. ಅಪ್ರಮೇಯನು :– ಉಪಮಾನಗಳ ಮೂಲಕ ತಿಳಿಸಲು ಸಾಧ್ಯವಿಲ್ಲದವನು.
14. ನಿರ್ಗುಣನು :– ಗುಣರಹಿತನು

15. ವರ್ಣಹೀನನು :– ಕುಲಗೋತ್ರ ಇಲ್ಲದವನು. ಲಿಂಗ, ವಚನ, ವಿಭಕ್ತಿಗಳು ಇಲ್ಲದವನು.

16. ನಿರ್ಮಲನು:–ಪರಿಶುದ್ಧನು, ಮಲಿನವಿಲ್ಲದವನು.

17. ಅವ್ಯಯನು:–ಕ್ಷೀಣಿಸದವನು, ನಾಶವಾಗದವನು

18. ಅವಿನಾಶಿ:–ನಾಶವಿಲ್ಲದವನು

19. ಹುಟ್ಟುಸಾವುಗಳು ಇಲ್ಲದವನು:–ಅಂತ್ಯ, ಆರಂಭ, ಇರದವನು, ಸೃಷ್ಟಿಸಲ್ಪಟ್ಟವನು, ಅಂತ್ಯಮಾಡಲು ಸಾಧ್ಯವಾಗದವನು

20. ಅನಂತನು :– ಆದಿ, ಅಂತ್ಯಗಳು ಇಲ್ಲದವನು.

21. ಅಪರಿಮಿತನು:–ಪರಿಮಾಣ ಇಲ್ಲದವನು

22. ಷಡೂರ್ಮ ರಹಿತನು:–ಅಂದರೆ 1. ಜನನ, ಮರಣಗಳು, ಶರೀರ ಧರ್ಮ 2. ಹಸಿವು, ನೀರಡಿಕೆ ಪ್ರಾಣಧರ್ಮ. 3. ಶೋಕ, ಮೋಹಗಳು ಮನೋಧರ್ಮ ಇವೆಲ್ಲವೂ ಇಲ್ಲದವನು.

23. ರಾಗದ್ವೇಷಗಳು ಇಲ್ಲದವನು :–ಅನುರಾಗ, ದ್ವೇಷ ಇಲ್ಲದವನು, ಶತ್ರು ಮಿತ್ರರು ಇಲ್ಲದವನು.. ಅಂದರೆ ಪೂಜೆ ಮಾಡಿದವರನ್ನು ಒಂದು ರೀತಿಯಾಗಿ, ಮಾಡದವರನ್ನು ಒಂದು ರೀತಿಯಾಗಿ ನೋಡುವುದಿಲ್ಲ.

24. ಜಗನ್ನಾಟಕ ಸೂತ್ರಧಾರ :– ಈ ಜಗತ್ತು ಎನ್ನುವ ನಾಟಕಕ್ಕೆ ಸೂತ್ರಧಾರ, ನಿರ್ಮಾಪಕ, ದರ್ಶಕ.

25. ನಿಶ್ಚಲನು :– ನಿಶ್ಚಲವಾಗಿ ಪ್ರಕಾಶಿಸುವವನು.

26. ಸಾಕ್ಷೀಭೂತನು:–ಎಲ್ಲದಕ್ಕೂ ಸಾಕ್ಷಿಯಾದವನು. ಯಾರ ವಿಷಯಕ್ಕೂ ಮೂಗು ತೂರಿಸಿದವನು.

27. ಪರಿಪೂರ್ಣನು:– ಪೂರ್ಣತ್ವದಿಂದ ತುಂಬಿದವನು.

28. ಕಾಲಾತೀತನು :–ಕಾಲಕ್ಕೆ ಅತೀತನಾದವನು.

29. ಅಖಂಡನು :–ಖಂಡಗಳಾಗಿ ಅಲ್ಲದೇ ಒಂದಾಗಿರುವವನು.

30. ಅಕ್ಷರನು :–ನಾಶವಿಲ್ಲದವನು.

31. ಸ್ವಯಂ ಪ್ರಕಾಶನು :–ಒಬ್ಬರಿಂದ ಪ್ರಕಾಶಿಸದೆ, ಸ್ವಯಂ ಪ್ರಕಾಶಿಸುವವನು.

32. ಇಚ್ಛೆ ಇಲ್ಲದವನು:–ಕೋರಿಕೆಗಳು ಇಲ್ಲದವನು.

33. ಕ್ರಿಯಾಹೀನನು:– ಕರ್ಮಗಳು ಮಾಡದವನು.

34. ನಿಷ್ಕ್ರಿಯನು:– ಕರ್ಮ ಮಾಡದವನು.

35. ಉಪಾಧಿ ಹೀನ :–ಉಪಚಾರಗಳು ಇಲ್ಲದವನು, ಉಪಚಾರ ಬಯಸದವನು.

36. ಅಕಲ್ಪಿತನು :–ಆಕಾರ ಕಲ್ಪಿಸದವರು, ಸೃಷ್ಟಿಸದವರು.

37. ಸ್ವಯಂಭು :–ಯಾರಿಂದಲೂ ಸೃಷ್ಟಿಸಲ್ಪಡದವನು. ತನಗೆ ತಾನೇ ಇರುವವನು. ಯಾರಿಂದಲೂ ಪ್ರಾಣ ಪ್ರತಿಷ್ಠೆ ಮಾಡಿಸಿಕೊಳ್ಳದವನು.

38. ಆದಿ ಮಧ್ಯಂತ ರಹಿತನು :–ಅಂದರೆ ಮೊದಲು, ಮಧ್ಯೆ, ಕೊನೆಯಿಲ್ಲದವನು. ಅಂದರೆ, ಯಾವಾಗಲೂ ಇರುವವನು.

39. ಅಣುಅಣುವು ವ್ಯಾಪಿಸಿ ಇರುವವನು :–ಆತ ಇಲ್ಲದ ಪ್ರದೇಶವೆಂದು ಯಾವುದೂ ಇಲ್ಲ. ಹಾಗಾಗಿ ಆತನಿಗೆ ಆವಾಹನೆ, ವಿಸರ್ಜನೆ, ಮಾಡಲಾಗದು.

40. ಸಕಲ ಚರಾಚರ ರೂಪನು :–ಸೃಷ್ಟಿಯಲ್ಲಿನ ಚರಗಳು ಅಂದರೆ, ಚಲಿಸುವಂತವು... ಅಂದರೆ, ವೃಕ್ಷಗಳು, ಖನಿಜಗಳಂತಹ ರೂಪಗಳು ಹೊಂದಿರುವವನು ಅಂದರೆ ಎಲ್ಲದರಲ್ಲೂ,ಎಲ್ಲೆಡೆ ವ್ಯಾಪಿಸಿರುವವನು.

41. ಅಭೋಕ್ತ :–ಭೋಗಿಸುತ್ತಾ ಇದ್ದರೂ ಭೋಗಿಸದವನು ನೋಡುತ್ತಿದ್ದರೂ ನೋಡದಂತೆ ಇರುವವನು.

42. ಪಕ್ಷಪಾತ ರಹಿತನು :– ಯಾವ ಪಕ್ಷ ವಹಿಸದವನು. ಅಂದರೆ ಯಾರಿಗೂ ಪಕ್ಷಪಾತ ಮಾಡುವುದಿಲ್ಲ. ಒಬ್ಬರನ್ನು ಹೆಚ್ಚು ಎಂದು ಒಬ್ಬರನ್ನು ಕಡಿಮೆ ಎಂದು ನೋಡುವುದಿಲ್ಲ.

43. ಅದ್ವೈತನು:–ದ್ವೈತವಲ್ಲದವನು, ಎರಡಾಗಿ ಇಲ್ಲದವನು, ಒಂದಾಗಿ ಇರುವವನು.

44. ನಿತ್ಯನು :–ನಿತ್ಯವಾಗಿರುವವನು.

45. ಶಾಶ್ವತನು :–ಶಾಶ್ವತವಾದವನು, ಅಂದರೆ ಯಾವಾಗಲೂ ಇರುವವನು.

46. ಸತ್ಯವಾದವನು:–ಬದಲಾಗದವನು, ಯುಗಗಳು ಬದಲಾದರೂ ಬದಲಾಗದವನು.

47. ಚೈತನ್ಯ ಸ್ವರೂಪನು :–ಸಮಸ್ತ ಜೀವರಾಶಿಗೆ ಚೈತನ್ಯವನ್ನುಂಟು ಮಾಡುವವನು. ಅಂದರೆ, ಚಲಿಸಬಲ್ಲ, ಕೆಲಸ ಮಾಡುವ ಶಕ್ತಿಯನ್ನು ನೀಡಿದವನು.

48. ಆನಂದ ಸ್ವರೂಪ:–ಯಾವಾಗಲೂ ಆನಂದದಲ್ಲಿ ಇರುವವನು. ಅಂದರೆ ಆನಂದವೇ ಆಗಿರುವ ಸ್ವರೂಪನು.

49. ಸಚ್ಚಿದಾನಂದ ಸ್ವರೂಪ :–ಅಂದರೆ (ಸತ್– ಚಿತ್– ಆನಂದ) ಸತ್ ಎಂದರೆ ಸತ್ಯ ಸ್ವರೂಪ, ಚಿತ್ ಎಂದರೆ ಚೈತನ್ಯ ಸ್ವರೂಪ ಆನಂದ ಅಂದರೆ ಆನಂದ ಸ್ವರೂಪ.

50. ನಾಶರಹಿತನು:– ನಾಶವಾಗದವನು, ಅವಿನಾಶಿ.

51. ಮಾಯಾತೀತನು :–ಅಂದರೆ ಮಾಯೆಗೆ ಒಳಗಾಗದವನು.

52. ಚಿದ್ರೂಪನು:– ಮಹತ್ತರವಾದ ರೂಪಾವುಳ್ಳವನು

53. ಸನಾತನನು :–ಆದಿ, ಆರಂಭ ಇಲ್ಲದವನು, ಅನಾದಿ ರೂಪನು.

54. ಅನಂತ ಶಕ್ತಿ ಸ್ವರೂಪ :–ವರ್ಣಿಸಲಾರದಷ್ಟು ಶಕ್ತಿಯುಳ್ಳವನು, ಅದಕ್ಕೆ ಆತ್ಮವಿಲ್ಲದ ದೇಹವನ್ನು ಅಂದರೆ ಶವವನ್ನು ಯಾರು ಕೆಲಸ ಮಾಡಿಸಲು ಸಾಧ್ಯವಿಲ್ಲ... ಆದರೆ ಆತ್ಮವು ದೇಹವನ್ನು ಕೆಲಸ ಮಾಡಿಸುತ್ತದೆ. ಅಷ್ಟೇ ಅಲ್ಲ ಸೃಷ್ಟಿಯಲ್ಲಿನ 84 ಲಕ್ಷ ಜೀವರಾಶಿಗಳು ಕೂಡಾ ಆತ್ಮದಿಂದ ಚಲಿಸುತ್ತಿವೆ. ಹಾಗಾಗಿ ಆತ್ಮ ಅನಂತ ಶಕ್ತಿಯುಳ್ಳದ್ದು ಎಂದು ಹೇಳುತ್ತಾರೆ.

55. ತುರಿಯಾತೀತ :–ತುರೀಯಕ್ಕಿಂತ ಅತೀತವಾಗಿ ಇರುವವನು.

   1. ಜಾಗ್ರತೆ : ಶರೀರ, ಇಂದ್ರಿಯಗಳು ಕೆಲಸ ಮಾಡುತ್ತವೆ.
   2. ಸ್ವಪ್ನ :ಮನಸ್ಸು ಮಾತ್ರವೇ ಕೆಲಸ ಮಾಡುತ್ತದೆ.

3. ಸುಷುಪ್ತಿ :ಮನಸ್ಸು ಕೆಲಸ ಮಾಡುವುದಿಲ್ಲ

4. ತುರೀಯಂ : ಮನಸ್ಸೇ ಇರುವುದಿಲ್ಲ ಅಂದರೆ ಶೂನ್ಯವಾಗುತ್ತದೆ.

5. ತುರೀಯಾತೀತ : ಯಾವುದು ಇರುವುದಿಲ್ಲ, ಮಹಾಶೂನ್ಯ.

56. ಪರಾತ್ಪರನು :– ಪರಕ್ಕಿಂತ ಪರವಾಗಿ ಇರುವವನು.

57. ವಿಶ್ವರೂಪನು :–ವಿಶ್ವವೆಲ್ಲಾ ಆತನ ರೂಪವೇ

58. ವಿಶ್ವಾತ್ಮ :–ವಿಶ್ವವೆಲ್ಲಾ ವ್ಯಾಪಿಸಿರುವ ಆತ್ಮ.

59. ಮೂಲಾತ್ಮ:– ಎಲ್ಲಾ ಆತ್ಮಗಳಿಗೆ ಮೂಲವಾದ ಆತ್ಮ

60. ಪರಮಾತ್ಮ :–ಎಲ್ಲರಿಗಿಂತ ದೊಡ್ಡವನು.

61. ಪರಬ್ರಹ್ಮ :–ಎಲ್ಲರಿಗೂ ತಂದೆ ಸಮಾನನಾದವನು.

62. ಸೃಷ್ಟಿಕರ್ತ :–ಸಕಲ ಚರಾಚರ ಸೃಷ್ಟಿಯನ್ನು ಸೃಷ್ಟಿಸಿದವನು.

ಒಂದು ವಿಧವಾಗಿ ಹೇಳಬೇಕೆಂದರೆ.. ಸತ್ಯದ ಕುರಿತು ಅಂದರೆ ಭಗವಂತನ ಕುರಿತು ಯಾರೂ ವರ್ಣಿಸಲಾರರು, ಹೇಳಲಾರರು , ತಿಳಿದುಕೊಳ್ಳಲಾರರು, ಆತ ಎಲ್ಲಕ್ಕೂ ಅತೀತನು ಉನ್ನತವಾದವನು ಭಗವಂತನು.

ಆದ್ದರಿಂದ ಯಾರು ಸತ್ಯವನ್ನು ಆಶ್ರಯಿಸುತ್ತಾರೋ!ಅವರು ಶಕ್ತಿವಂತರು ಆಗುತ್ತಾರೆ. ಹೆಚ್ಚು ಶಕ್ತಿವಂತರಾದರೆ ಏನಾಗುತ್ತಾರೆ.. ಒಬ್ಬ ರಮಣ ಮಹರ್ಷಿ, ಸ್ವಾಮಿ ವಿವೇಕಾನಂದ, ವೀರಬ್ರಹ್ಮೇಂದ್ರ ಸ್ವಾಮಿ, ಶಿರಡಿ ಸಾಯಿಬಾಬಾ, ಪತ್ರೀಜಿಯವರಂತೆ ಆಗುತ್ತಾರೆ. ಹೀಗೆ ಯುಗ ಯುಗಗಳಿಂದ ಎಷ್ಟೋ ಜನರು ಯೋಗಿಗಳಾಗಿದ್ದಾರೆ, ದಿವ್ಯಾತ್ಮರಾಗಿದ್ದಾರೆ, ಪರಮಾತ್ಮರಾಗಿದ್ದಾರೆ.. ಎಷ್ಟೋ ಶಕ್ತಿಯನ್ನು ಹೊಂದಿದ್ದಾರೆ, ಶಕ್ತಿವಂತರಾಗಿದ್ದಾರೆ.

ಹಾಗೆಯೇ ಶಕ್ತಿ ಹೊಂದಿರುವವರ ಪ್ರವರ್ತನೆ ಹೇಗಿರುತ್ತದೆ ತಿಳಿದುಕೊಳ್ಳೋಣ.

1. ಎಂತಹ ಪರಿಸ್ಥಿತಿಯಲ್ಲಿ ಸುಳ್ಳು ಹೇಳುವುದಿಲ್ಲ.

2. ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು ಮಾಡುವುದಿಲ್ಲ.

3. ಯಾರ ಮೇಲೆಯೂ ಅಸೂಯೆ ಪಡುವುದಿಲ್ಲ, ವಿಮರ್ಶಿಸುವುದಿಲ್ಲ.
4. ದೊಡ್ಡಸ್ತಿಕೆ ತೋರಿಸುವುದಿಲ್ಲ, ಆಸೆಯು ಪಡುವುದಿಲ್ಲ.
5. ವರ್ತಮಾನದಲ್ಲಿ ಜೀವಿಸುತ್ತಾರೆ.
6. ಸಾಕ್ಷೀ ಭೂತವಾಗಿ ವ್ಯವಹರಿಸುತ್ತಾರೆ.
7. ತ್ರಿಕರಣ ಶುದ್ಧಿಯಾಗಿ ಜೀವಿಸುತ್ತಾರೆ.
8. ಯಾವುದನ್ನೂ ಹಿಂಸಿಸುವುದಿಲ್ಲ, ಇರುವೆ, ಸೊಳ್ಳೆ, ಜಿರಳೆ ಮುಂತಾದವುಗಳನ್ನು ಸಾಯಿಸುವುದಿಲ್ಲ
9. ಯಾರನ್ನೂ ದ್ವೇಷಿಸುವುದಿಲ್ಲ, ಎಲ್ಲರನ್ನೂ ಪ್ರೇಮಿಸುತ್ತಾರೆ.
10. ಯಾವುದನ್ನೂ ಕೋರುವುದಿಲ್ಲ ಎಲ್ಲವನ್ನೂ ಎಲ್ಲರಿಗೆ ಹಂಚುತ್ತಾರೆ.
11. ಯಾರ ಕಾಲಿನ ಮೇಲೆ ಬೀಳುವುದಿಲ್ಲ.
12. ರಾಗದ್ವೇಷಗಳು ಇರುವುದಿಲ್ಲ.
13. ದ್ವಂದ್ವಗಳಲ್ಲಿ ಅಂದರೆ, ಮಾನ–ಅವಮಾನಗಳಲ್ಲಿ, ನಿಂದಾಸ್ತುತಿಗಳಲ್ಲಿ, ಸೋಲು–ಗೆಲುವಿನಲ್ಲಿ, ಸುಖ–ದುಃಖಗಳಲ್ಲಿ, ಹುಟ್ಟು– ಸಾವುಗಳಲ್ಲಿ ಸಮಸ್ಥಿತಿಯಲ್ಲಿ ಇರುತ್ತಾರೆ.
14. ಧರ್ಮದಿಂದ ಜೀವಿಸುತ್ತಾರೆ.
15. ಜ್ಞಾನ ಹೊಂದುವುದೇ ಅಲ್ಲ, ಎಲ್ಲರನ್ನೂ ಜ್ಞಾನವಂತರನ್ನಾಗಿಸಲು ಪ್ರಯತ್ನಿಸುತ್ತಾರೆ.
16. ಸತ್ಯದಲ್ಲಿ ಜೀವಿಸುತ್ತಾರೆ.
17. ಆತ್ಮಕರ್ಮಗಳು, ಆತ್ಮ ಸೇವೆಗಳು ಮಾಡುತ್ತಾರೆ.
18. ಪೂರ್ಣಾತ್ಮರಾಗುತ್ತಾರೆ, ಸತ್ಯಲೋಕ ಸೇರಿಕೊಳ್ಳುತ್ತಾರೆ.

# ಸತ್ಯವನ್ನು ಆಶ್ರಯಿಸಿದರೆ

ಸತ್ಯವನ್ನು ಆಶ್ರಯಿಸಿದವರು ಅಂದರೆ "ಶ್ವಾಸದ ಮೇಲೆ ಗಮನ" ಇರಿಸಿ ಧ್ಯಾನ ಮಾಡಿದವರ ಪ್ರವರ್ತನೆ ಹೇಗೆ ಬದಲಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳೋಣ.

1.ಸತ್ಯವನ್ನು ಆಶ್ರಯಿಸಿದವರು ಎಲ್ಲಾ ಜೀವಿಗಳ ಮೇಲೆ ಅನುಕಂಪ ಕರುಣೆ ದಯೆ ತೋರಿಸುತ್ತಾರೆ., ಅವುಗಳನ್ನು ರಕ್ಷಿಸುತ್ತಾರೆ;

2. ಸತ್ಯವನ್ನು ಆಶ್ರಯಿಸಿದವರು ಎಲ್ಲರಿಗೂ ಒಳ್ಳೆಯದನ್ನೇ ಮಾಡುತ್ತಾರೆ.

3. ಸತ್ಯವನ್ನು ಆಶ್ರಯಿಸಿದವರು ಯಾರ ಮೇಲೆಯೂ ಹಠ ಸಾಧಿಸುವುದಿಲ್ಲ, ದ್ವೇಷ ಸಾಧಿಸುವುದಿಲ್ಲ.

4. ಸತ್ಯವನ್ನು ಆಶ್ರಯಿಸಿದವರು ಎಲ್ಲರೊಂದಿಗೆ ಸ್ನೇಹಪೂರ್ವಕವಾಗಿರುತ್ತಾರೆ.

5. ಸತ್ಯವನ್ನು ಆಶ್ರಯಿಸಿದವರು ಅರಿಷಡ್ವರ್ಗಗಳು ಅಂದರೆ ಕಾಮವನ್ನು ಅಂದರೆ ಕೋರಿಕೆಗಳನ್ನು, ಕ್ರೋಧಗಳನ್ನು ಅಂದರೆ ಕೋಪವನ್ನು, ಲೋಭವನ್ನು, ಅಂದರೆ ಜಿಪುಣತನವನ್ನು, ಮೋಹವನ್ನು ಅಂದರೆ ವಿಪರೀತವಾದ ವ್ಯಾಮೋಹವನ್ನು, ಮದವನ್ನು, ಅಂದರೆ ಗರ್ವವನ್ನು, ಮತ್ಸರವನ್ನು, ಅಂದರೆ ಅಸೂಯೆಯನ್ನು ಅಂಕೆಯಲ್ಲಿ ಇರಿಸಿಕೊಳ್ಳುತ್ತಾರೆ ;

6. ಸತ್ಯವನ್ನು ಆಶ್ರಯಿಸಿದವರು ಎಲ್ಲರಿಗೂ ಆದರ್ಶವಂತರಾಗುತ್ತಾರೆ.

7. ಸತ್ಯವನ್ನು ಆಶ್ರಯಿಸಿದವರಿಗೆ ಬುದ್ಧಿ ವಿಕಾಸವಾಗುತ್ತದೆ.

8. ಸತ್ಯವನ್ನು ಆಶ್ರಯಿಸಿದವರಿಗೆ ಜ್ಞಾನೋದಯವಾಗುತ್ತದೆ.

9. ಸತ್ಯವನ್ನು ಆಶ್ರಯಿಸಿದವರುಎಲ್ಲರೂ ಒಂದೇ ಎಂದು ತಿಳಿದುಕೊಳ್ಳುತ್ತಾರೆ. ಎಲ್ಲರನ್ನೂ, ಎಲ್ಲವನ್ನು ಪ್ರೇಮಿಸುತ್ತಾರೆ.

10. ಸತ್ಯದೊಂದಿಗೆ ಇರುವುದೇ ರಾಜಯೋಗ, ರಾಜಯೋಗವೆ ಎಲ್ಲಾ ಯೋಗಗಳಿಗಿಂತ ದೊಡ್ಡದು, ಆದ್ದರಿಂದ ಸತ್ಯವನ್ನು ಆಶ್ರಯಿಸಿದವರಿಗೆ ಇಷ್ಟು ವಿಧವಾದ ಬದಲಾವಣೆಗಳು, ಲಾಭಗಳು ಉಂಟಾಗುತ್ತದೆ. ಆದರೆ ಅಸತ್ಯದಲ್ಲಿ ಜೀವಿಸಿದರು, ಅಸತ್ಯ ಆಚರಿಸಿದರೂ, ಆರಾಧಿಸಿದರೂ ಇಂತಹ ಬದಲಾವಣೆಗಳು ಬರುವುದಿಲ್ಲ.

# ಸತ್ಯದ ಹಿರಿಮೆ!

ವೇದಗಳಲ್ಲಿ "ಸತ್ಯಂ ವದ –ಧರ್ಮಂ ಚರ." ಎಂದು ಹೇಳಲಾಗಿದೆ. ಅಂದರೆ ಸತ್ಯವನ್ನೇ ನುಡಿಯಬೇಕು. ಧರ್ಮವನ್ನು ಆಚರಿಸಬೇಕು ಎಂದು ಅರ್ಥ.

ಏಕೆಂದರೆ,ಮಾನವ ಎರಡು ವಿಧಗಳಾಗಿ ಕರ್ಮಗಳನ್ನು ಮಾಡುತ್ತಾನೆ. 1. ಮಾತಿನಲ್ಲಿ, 2. ಕೈಗಳಲ್ಲಿ ಮಾನವನು ಮಾಡುವ ಕರ್ಮಗಳು ಮಾನವರಿಗೆ ನಷ್ಟ ಉಂಟುಮಾಡದ ರೀತಿಯಲ್ಲಿ ಇರಬೇಕೆಂದರೆ, ಮಾತುಗಳು ಸತ್ಯವಾಗಿ ಇರಬೇಕು. ಸತ್ಯವನ್ನೇ ಮಾತನಾಡಬೇಕು. ಅಸತ್ಯವನ್ನು ಆಶ್ರಯಿಸಿದವರು ಸತ್ಯವನ್ನು ಮಾತನಾಡಲಾರರು. ಹಾಗೆಯೇ ಕೃತಿಗಳು ಧರ್ಮಯುತವಾದ ಕೆಲಸಗಳೇ ಮಾಡಬೇಕು.

ಅಷ್ಟೇ ಅಲ್ಲ "ಸತ್ಯಮೇವ ಜಯತೇ" ಎಂದು ಹೇಳಲಾಗಿದೆ. ಎಲ್ಲಾ ವಿಷಯದಲ್ಲಿ ಸತ್ಯವೇ ಜಯಿಸುತ್ತದೆ ಎಂದು ತಿಳಿದುಕೊಳ್ಳಬೇಕು. ಹಾಗೆಯೇ ಅಸತ್ಯದಿಂದ ಅಪಜಯ ಉಂಟಾಗುತ್ತದೆ ಎಂದು ಕೂಡಾ ತಿಳಿದುಕೊಳ್ಳಬೇಕು.

ಆದ್ದರಿಂದ ಸತ್ಯವನ್ನು ತಿಳಿದುಕೊಳ್ಳಬೇಕು, ಸತ್ಯವನ್ನೇ ಆಶ್ರಯಿಸಬೇಕು, ನುಡಿಯಬೇಕು, ಸತ್ಯದಲ್ಲೇ ಜೀವಿಸಬೇಕು. ವೇದಗಳಲ್ಲಿ "ತತ್ವಮಸಿ "ಎಂದು ಹೇಳಲಾಗಿದೆ.

'ತತ್' ಎಂದರೆ 'ಅದು' ಅಂದರೆ ಸತ್ಯ, ಅಂದರೆ ಭಗವಂತನು. ಮಸಿ ಅಂದರೆ ಆಗಿರುವೆ. ಅಂದರೆ 'ಅದೆ ನೀನಾಗಿರುವೆ' ಅಂದರೆ ಸತ್ಯವೇ ನೀನಾಗಿರುವೆ ಎಂದು ಅರ್ಥ.

ಯಾರಿಗಾದರೂ ಸತ್ಯದ ಅರಿವಾಗದ ಹೊರತು, ಬೇರೆ ಏನು ಅರ್ಥವಾಗುವುದಿಲ್ಲ, ಎಲ್ಲವೂ ಸಂದೇಹಗಳೇ!ಸಂಶಯಗಳೇ! ಎಲ್ಲಾ ವಿಷಯಗಳಲ್ಲೂ ಅಯೋಮಯವೇ, ಗೊಂದಲವೇ. ಆದರೆ ಸತ್ಯ ತಿಳಿದರೆ ಎಲ್ಲಾ ಅಗಮ್ಯ ಗೋಚರವೇ.

ಅಷ್ಟೇ ಅಲ್ಲದೇ ಸತ್ಯವನ್ನು ಆಶ್ರಯಿಸಿದವರಿಗೆ ಶಾಂತಿ, ಆನಂದ.. ಇಲ್ಲದಿದ್ದರೆ ಅಶಾಂತಿ ದುಃಖ.

ಅಷ್ಟೇ ಅಲ್ಲ ಪತ್ರೀಜಿ ಏನು ಹೇಳುತ್ತಾರೆಂದರೆ? ಸತ್ಯದಲ್ಲಿ ಜೀವಿಸುವುದೇ ಆಧ್ಯಾತ್ಮಿಕತೆ . ಅಸತ್ಯದಲ್ಲಿ ಜೀವಿಸುವುದೇ ಅನಾಧ್ಯಾತ್ಮಿಕತೆ ಎನ್ನುತ್ತಾರೆ. ಹಾಗೆಯೇ ಸತ್ಯವನ್ನು ಆಶ್ರಯಿಸಿದರೆ ತೃಪ್ತಿ, ಸಂತೃಪ್ತಿ ಇಲ್ಲದಿದ್ದರೆ, ಆಸಂತೃಪ್ತಿ ಮಾನವನಿಗೆ

ಸತ್ಯವನ್ನು ಆಶ್ರಯಿಸದವರ ಹೊರತು ಬೇರೊಂದು ಮಾರ್ಗವಿಲ್ಲ ಎಂದು ತಿಳಿದುಕೊಳ್ಳಬೇಕು. ಸತ್ಯವನ್ನು ಆಶ್ರಯಿಸುವ ಮಾರ್ಗವೇ "ಶ್ವಾಸದ ಮೇಲೆ ಗಮನ " ಧ್ಯಾನ.

ನಮ್ಮ ಕಣ್ಣಿಗೆ ಕಾಣಿಸುವ ಪ್ರಪಂಚವನ್ನು ತೆಗೆದುಕೊಳ್ಳೋಣ, ಅದರಲ್ಲಿ ಯಾವುದು ಶಾಶ್ವತವಾಗಿರುತ್ತದೆ? ಯಾವುದು ಬದಲಾವಣೆ ಆಗದೇ ಇರುತ್ತದೆ? ಯಾವುದು ಯಾವಾಗಲೂ ಇರುತ್ತದೆ? ಅಂದರೆ ಯಾವುದು ಇರುವುದಿಲ್ಲ.

ಆಗೆ ಗಮನಿಸಿದರೆ, ಅನಂತವಾಗಿರುವ ವೃಕ್ಷ ಜಾತಿಯನ್ನು ಆಗಲಿ, ಕ್ರಿಮಿ ಕೀಟ ಜಾತಿಯಾಗಲಿ, ಮತ್ಸ್ಯ ಜಾತಿ, ಪಕ್ಷಿಜಾತಿ, ಪ್ರಾಣಿಸಾಮ್ರಾಜ್ಯ, ಮಾನವ ಜಾತಿಯಾಗಲಿ ಎಲ್ಲವೂ ಹುಟ್ಟುತ್ತವೆ, ಬೆಳೆಯುತ್ತವೆ ಅಂದರೆ ಬದಲಾವಣೆ ಆಗುತ್ತದೆ, ಕೊನೆಗೆ ಅಂತ್ಯವಾಗುತ್ತದೆ. ಯಾವುದು ತೆಗೆದುಕೊಂಡರೂ ಇದು ನಡೆಯುವುದೇ. ಅದಕ್ಕೆ ಯಾವ ಜೀವಿ ಶರೀರಕ್ಕಾದರೂ ಆರು ವಿಧವಾದ ವಿಕಾರಗಳು ಇರುತ್ತವೆ.

ಅವು ಯಾವುವೆಂದರೆ? :– 1) ಹುಟ್ಟುತ್ತದೆ, 2) ಇರುತ್ತದೆ, 3) ಬೆಳೆಯುತ್ತದೆ, 4) ಬದಲಾವಣೆ ಹೊಂದುತ್ತದೆ, 5) ಕೃಶವಾಗುತ್ತದೆ, 6) ನಶಿಸುತ್ತದೆ.

ಇದರ ಸೂಚನೆ ಯಾವುದೂ ಶಾಶ್ವತವಿಲ್ಲ, ಯಾವಾಗಲೂ ಇರುವುದಿಲ್ಲ ಎಂದು ತಿಳಿಯುತ್ತದೆ. ಅಂದರೆ ಯಾವುದೂ ಸತ್ಯವಲ್ಲ ಎಂದು ತಿಳಿಯುತ್ತದೆ.

ಕಾಲ ಬದಲಾಗುತ್ತಿದ್ದರೆ ಎಲ್ಲವೂ ಬದಲಾಗುತ್ತಾ ಇರುತ್ತದೆ. ಪ್ರಪಂಚದಲ್ಲಿ ಬದಲಾವಣೆ ಎನ್ನುವುದು ಸಹಜಾತಿಸಹಜ. ಬದಲಾವಣೆ ಇಲ್ಲದೇ ಯಾವುದೂ ಇರುವುದಿಲ್ಲ. ನಾವು ಯುಗ, ಯುಗಗಳಿಂದ ನೋಡುತ್ತಾ ಇದ್ದೇವೆ. ರಾಜ್ಯಗಳು ಹೋದವು, ರಾಜರು ಬದಲಾದರು, ಎಷ್ಟೋ ಜನರು ಭೂಮಿಯನ್ನು ಬಿಟ್ಟು ಹೊರ ನಡೆದರು, ಎಷ್ಟೋ ವಸ್ತು ವಿಷಯಗಳು ಜೀವ ಕೋಟಿಯು ಉದ್ಭವಿಸಿ ಅದೃಶ್ಯವಾಗಿ ಹೋಗಿದೆ. ಅಂದರೆ ಯಾವುದು ಶಾಶ್ವತವಲ್ಲ, ಸತ್ಯವಲ್ಲ ಎಂದು ನಾವು ಇವುಗಳಿಂದ ತಿಳಿದುಕೊಳ್ಳಬಹುದು.

ಕೊನೆಗೆ ನಮ್ಮ ಕಣ್ಣಿಗೆ ಕಾಣಿಸುವ ಸೂರ್ಯ, ಚಂದ್ರ, ನಕ್ಷತ್ರಗಳು, ಗ್ರಹಗಳು, ಗ್ರಹ ಮಂಡಲಗಳು ಎಲ್ಲವೂ ಕೂಡ ಸೃಷ್ಟಿಯಲ್ಲಿ ಇರುವ ಎಲ್ಲವೂ ಅಂತ್ಯವಾಗುವುದೇ ನಶಿಸು ಹೋಗುವಂಥಹುದೆ, ಅಷ್ಟೇ ಅಲ್ಲ ಕೊನೆಗೆ ಎಲ್ಲರೂ ದೊಡ್ಡವನೆಂದು ಭಾವಿಸುವ ದೇವರುಗಳಿಗೆ ಕೂಡಾ ಆಯುಷ್ಯ ಇರುತ್ತದೆ. ಅಂದರೆ,ಆಯುಷ್ಯ ಮುಗಿದ ಮೇಲೆ ಅವರೂ ಅದೃಶ್ಯವಾಗುತ್ತಾರೆ ಅಂದರೆ

ಯಾರೂ ಶಾಶ್ವತವಲ್ಲ... "ಒಬ್ಬ ಭಗವಂತನು ಅಂದರೆ ಪರಮಾತ್ಮ,ಪರಬ್ರಹ್ಮ, ಆತ್ಮ ಎಂದು ಕರೆಯಿಸಿಕೊಳ್ಳುವವರು ಹೊರತು ಎಲ್ಲವೂ ಅದೃಶ್ಯವಾಗುವಂತಹವರೆ" ಎಂದು ಅರ್ಥ ಮಾಡಿಕೊಳ್ಳಬೇಕು.

ಈ ವಿಷಯವೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಭಗವಾನರು ಹೇಳಿದ್ದಾರೆ.

**ಶ್ಲೋ ॥ ಸಹಸ್ರ ಯುಗ ಪರ್ಯಸ್ತಮಹಾರ್ಯ ದ್ರಪ್ಷಣೋ ವಿದು:**
**ರಾತ್ರಿಂ ಸಹಸ್ತ್ರಾನಾಮ್ ತೇ ಹೋರಾತ್ರವಿದೋ ಜನಾ: (ಭ. ಗೀ.8–17)**

ತಾ :– ಯಾವ ಜನರು ಬ್ರಹ್ಮದೇವನ ಹಗಲನ್ನು ಸಾವಿರ ಯುಗಗಳ ಪರಿಮಿತಿ ಇರುವುದನ್ನು, ಹಾಗೆಯೇ ಸಾವಿರ ಯುಗಗಳ ಪರಿಮಿತಿ ಇರುವ ರಾತ್ರಿಯನ್ನು ಅರಿಯುವರೋ, ಅಂತಹವರು ಹಗಲು ರಾತ್ರಿಯ ತತ್ವ ಕೂಡಾ ಅರಿತವರಾಗುವರು.

ಶ್ರೀ ವಿದ್ಯಾ ಪ್ರಕಾಶಾನಂದಗಿರಿ ಸ್ವಾಮಿಯವರು ಭಗವದ್ಗೀತೆಯಲ್ಲಿ ಹೇಳಲಾದ ಈ ಶ್ಲೋಕದ ಮೂಲಕ ಬ್ರಹ್ಮದೇವನ ಆಯುಷ್ಯವನ್ನು ಈ ವಿಧವಾಗಿ ವಿವರಿಸಿದ್ದಾರೆ.

| | | |
|---|---|---|
| 1) | ಕಲಿಯುಗ | 4,32,000 |
| 2) | ದ್ವಾಪರಯುಗ (ಕಲಿಯುಗಕ್ಕೆ ಎರಡು ಪಟ್ಟು) | 8,64,000 |
| 3) | ತ್ರೇತಾಯುಗ (ಕಲಿಯುಗಕ್ಕೆ ಮೂರು ಪಟ್ಟು ) | 12,96,000 |
| 4) | ಸತ್ಯಯುಗ (ಕಲಿಯುಗಕ್ಕೆ ನಾಲ್ಕು ಪಟ್ಟು ) | 17,28,000 |
| | ಒಟ್ಟು | 43,20,000 |

ಒಟ್ಟು 43,20,000 ವರ್ಷಗಳನ್ನು ಒಂದು ಮಹಾಯುಗ ಎನ್ನುತ್ತಾರೆ.

ಇಂತಹ ಸಾವಿರ ಮಹಾಯುಗಗಳು ಬ್ರಹ್ಮದೇವನಿಗೆ ಒಂದು ಹಗಲು.ಇನ್ನೊಂದು ಸಾವಿರ ಮಹಾಯುಗಗಳು ಬ್ರಹ್ಮದೇವನಿಗೆ ಒಂದು ರಾತ್ರಿ.

ಅಂದರೆ 43,20,000×1000=432,00,00,000 ವರ್ಷಗಳು ಬ್ರಹ್ಮನಿಗೆ ಹಗಲು

43,20,000×1000=432,00,00,000 ವರ್ಷಗಳು ಬ್ರಹ್ಮನಿಗೆ ರಾತ್ರಿ

ಒಟ್ಟು 864,00,00,000 ವರ್ಷಗಳು ಬ್ರಹ್ಮನಿಗೆ ಒಂದು ದಿನ.

ಇಂತಹ 360 ದಿನಗಳು ಬ್ರಹ್ಮ ದೇವನಿಗೆ ಒಂದು ವರ್ಷ ಆಗುತ್ತದೆ. ಅಂತಹ ನೂರು ಸಂವತ್ಸರಗಳು ಸೇರಿ ಬ್ರಹ್ಮದೇವನ ಆಯುಷ್ಯವಾಗುತ್ತದೆ.

ಇದರ ಅನುಸಾರ ಬ್ರಹ್ಮನಿಗೆ ಕೂಡಾ ಆಯುಷ್ಯವಿದೆ ಎಂದು ಅರ್ಥವಾಗುತ್ತದೆ. ಅಂದರೆ ಬ್ರಹ್ಮ ಕೂಡ ಶಾಶ್ವತವಲ್ಲ ಎಂದು ನಾವು ತಿಳಿದುಕೊಳ್ಳಬೇಕು.

ಆದರೆ ಸೃಷ್ಟಿಸಲ್ಪಟ್ಟ ಪರಬ್ರಹ್ಮ ಒಬ್ಬನೇ ಶಾಶ್ವತವಾದವನು, ನಾಶವಾಗದವನು, ಅಂತ್ಯವಿಲ್ಲದವನು ಎಂದು ತಿಳಿದುಕೊಳ್ಳಬೇಕು.

ಹಾಗಾಗಿ ಯಾವುದು ಶಾಶ್ವತವಲ್ಲ ಆತ್ಮ ಒಂದೆ ಶಾಶ್ವತ ಎಂದೂ ತಿಳಿಯುತ್ತದೆ. ಆದ್ದರಿಂದ ಆತ್ಮವೇ ಸತ್ಯ ಎಂದೂ ತಿಳಿದುಕೊಳ್ಳಬೇಕು. ಅದಕ್ಕೆ ಪತ್ರೀಜಿಯವರು ಸತ್ಯವಾದ ಆತ್ಮವನ್ನು ಆಶ್ರಯಿಸಬೇಕೆನ್ನುತ್ತಾರೆ.... ಆ ಸತ್ಯವನ್ನು ಅಂದರೆ ಆತ್ಮವನ್ನು ಆಶ್ರಯಿಸುವ ಮಾರ್ಗವೇನು? ಅಂದರೆ ಅದೇ "ಶ್ವಾಸದ ಮೇಲೆ ಗಮನ" ಧ್ಯಾನ ಯಾರು ಈ ಧ್ಯಾನ ಮಾಡಿ ಸತ್ಯವನ್ನು ಆಶ್ರಯಿಸುವರು ಅವರ ಜೀವನವೇ ಧನ್ಯ ಅವರಿಗಿಂತ ಅದೃಷ್ಟವಂತರು ಯಾರೂ ಇರುವುದಿಲ್ಲ.

ಆದ್ದರಿಂದ ಈಗ ನಾವು ಭಗವದ್ಗೀತೆಯಲ್ಲಿ ಹೇಳಲಾದ ಯುಗಾಂತದ ಕುರಿತು ಸೃಷ್ಟಿಯ ಅಂತ್ಯದ ಕುರಿತು ಹೇಳಿದ ವಿಷಯಗಳನ್ನು ತಿಳಿಯೋಣ..

**ಶ್ಲೋಕ ॥ ಪರಸ್ತಸ್ಮಾತ್ತು ಭಾವೋ ವ್ಯಕ್ತೋ ವ್ಯಕ್ತಾತ್ಸನಾತನ:।**
**ಯಸ್ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥**
**(ಭ. ಗೀ. 8–20 )**

ತಾ :– ಯಾವುದು ಅವ್ಯಕ್ತವಾದದ್ದೋ! ಉತ್ತಮವಾದದ್ದೋ ! ಇಂದ್ರಿಯಗಳಿಗೆ ವ್ಯಕ್ತವಾಗುವುದಿಲ್ಲವೋ! ಪುರಾತನವಾದದ್ದೋ! ಆ ಪರಮಾತ್ಮನು ಸಮಸ್ತ ಪ್ರಾಣಿಕೋಟಿಗಳು ನಶಿಸಿದರು, ನಶಿಸದೆಯೇ ಇರುವನು.

ಇಲ್ಲಿ ಶ್ರೀ ಕೃಷ್ಣನು ಸಮಸ್ತ ಪ್ರಾಣಿ ಕೋಟಿಗಳು ನಶಿಸಿದರು ಎಂದು ಹೇಳಿದ್ದಾನೆ.ಅಂದರೆ ಸೃಷ್ಟಿಯ ಕುರಿತು ಪ್ರಸ್ತಾವಿಸಲಾಗಿದೆ. ಅಷ್ಟೇ ಅಲ್ಲ ಸೃಷ್ಟಿ ಅಂತ್ಯವಾದರೂ ಅಂದರೆ ನಶಿಸಿದರು ಭಗವಂತನಿಗೆ ಅಂದರೆ ಆತ್ಮಕ್ಕೆ ನಾಶ ಇಲ್ಲವೆಂದು ಇಲ್ಲಿ ಹೇಳಲಾಗಿದೆ.

ಆತ ಇನ್ನೂ ಮುಂದುವರೆಸಿ ಈ ರೀತಿ ತನ್ನ ಶ್ಲೋಕದಲ್ಲಿ ಉಲ್ಲೇಖಿಸಿದ್ದಾನೆ.

**ಶ್ಲೋಕ ॥ "ಅವ್ಯಕ್ತಾದ್ವ್ಯಕ್ತಯಃ ಸರ್ವಾ: ಪ್ರಭವಸ್ತ್ಯಹಾರಾಗಮೇ ।**
**ರಾತ್ರ್ಯಾ ಗಮೇ ಪ್ರಲೀಯಂತೇ ತತ್ರೈವಾವ್ಯಕ್ತ ಸಜ್ಞಂಕೇ ॥**
**(ಭ.ಗೀ. 8–18)**

ತಾ :– ಬ್ರಹ್ಮದೇವನ ಹಗಲು ಪ್ರಾರಂಭವಾದಾಗ, ಭಗವಂತನಿಂದ ಅಂದರೆ ಅವ್ಯಕ್ತನಿಂದ ಸಮಸ್ತ ಚರಾಚರ ವಸ್ತುಗಳು ಹುಟ್ಟುತ್ತಿವೆ ಮತ್ತು ರಾತ್ರಿ ಪ್ರಾರಂಭವಾದಾಗ ಆ ಅವ್ಯಕ್ತನಲ್ಲಿಯೇ ಲೀನವಾಗುತ್ತಿದೆ.

ಇದರ ಅನುಸಾರ ಭಗವಂತನಿಗೆ ಹಗಲು ಪ್ರಾರಂಭವಾಗಿದೆ ಎಂದರೆ ಭಗವಂತನಿಂದ ಎಲ್ಲವೂ ಅಂದರೆ ಚರಾಚರ ವಸ್ತುಗಳೆಲ್ಲವೂ ಸೃಷ್ಟಿಸಲ್ಪಡುತ್ತಿವೆ. ಹಾಗೆಯೇ ಭಗವಂತನಿಗೆ ರಾತ್ರಿ ಪ್ರಾರಂಭವಾಗಿದೆ ಎಂದರೆ, ಸೃಷ್ಟಿಸಲ್ಪಟ್ಟಿರುವುದೆಲ್ಲವೂ ಭಗವಂತನಲ್ಲಿಯೇ ಲೀನವಾಗುತ್ತಿವೆ, ಅಂದರೆ ಅಂತ್ಯವಾಗುತ್ತಿವೆ. ಅದಕ್ಕೆ ಭಗವಂತನು ಕಣ್ಣು ಮುಚ್ಚಿದರೆ ಸೃಷ್ಟಿಯ ಅಂತ್ಯ. ಕಣ್ಣು ತೆರೆದರೆ ಸೃಷ್ಟಿಯ ಆರಂಭ ಎನ್ನುತ್ತಾರೆ.

ಅದನ್ನು ಈ ಕೆಳಗಿನ ಶ್ಲೋಕದಲ್ಲಿ ಹೇಳಲಾಗಿದೆ

**ಶ್ಲೋಕ :–ಭೂತಗ್ರಾಮಸ್ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ ।**
**ರಾತ್ರ್ಯಾಗಮೇ ವಶಃ ಪಾರ್ಥ ಪ್ರಭವತ್ಯ ಹರಾಗಮೇ ॥**
**(ಭ. ಗೀ.8–19)**

ತಾ :– ಅರ್ಜುನ ಹಾಯ ಪ್ರಾಣಿ ಸಮೂಹವೇ ಕರ್ಮ ಪರಾಧೀನವಾಗಿ ಹುಟ್ಟಿ ಬ್ರಹ್ಮದೇವನ ರಾತ್ರಿಯ ಆರಂಭದಲ್ಲಿ ಲೀನವಾಗುತ್ತಿವೆ. ಮತ್ತೆ ಬ್ರಹ್ಮದೇವನ ಪ್ರಾರಂಭದಲ್ಲಿ ಹುಟ್ಟುತ್ತಿವೆ.

**ಶ್ಲೋಕ : ಸರ್ವ ಭೂತಾನಿ ಕೌಂತೇಯ ಪ್ರಕೃತೀಂ ಯಾಂತಿ ಮಾಮಿಕಾಮ್ ।**
**ಕಲ್ಪಕ್ಷ್ಯಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಮ್ ॥**
**(ಭ. ಗೀ.9–7)**

ತಾ :– ಅರ್ಜುನಾ! ಸಮಸ್ತ ಪ್ರಾಣಿ ಕೋಟಿಗಳಲ್ಲಿ ಪ್ರಳಯ ಕಾಲದಲ್ಲಿ ನನ್ನ ಪ್ರಕೃತಿಯನ್ನು ಅಂದರೆ ಮಾಯೆಯನ್ನು ಸೇರಿ ಅದರಲ್ಲಿ ಅಡಗಿರುತ್ತೀನಿ ಸೃಷ್ಟಿ ಕಾಲದಲ್ಲಿ ಅವನನ್ನು ಮತ್ತೆ ನಾನು ಸೃಷ್ಟಿಸುತ್ತಿದ್ದೇನೆ.

ಇದರ ಅನುಸಾರ ಸಮಸ್ತ ಗ್ರಹ ಕೂಟಗಳು, ಸಮಸ್ತ ಲೋಕಗಳು ಅಂತ್ಯವಾಗಿ ಹೋಗುವುದೇ, ಶಾಶ್ವತವಾಗಿ ಇರುವುದು ಆತ್ಮವೊಂದೇ ಅಂದರೆ ಭಗವಂತನು ಒಬ್ಬನೇ ಎಂದು ನಮಗೆ ತಿಳಿಯುತ್ತದೆ. ಹಾಗಾಗಿ ಆತ್ಮವೇ ಸತ್ಯವೆಂದು ತಿಳಿದುಕೊಳ್ಳಬೇಕು.

# ಸತ್ಯದ ಹಿರಿಮೆಯನ್ನು ಮತ್ತಷ್ಟು ತಿಳಿದುಕೊಳ್ಳೋಣ

1. ಸೃಷ್ಟಿ ಆದಿಯಲ್ಲಿ ಇರುವುದು ಸತ್ಯವೇ. ಸೃಷ್ಟಿಯ ಅಂತ್ಯದಲ್ಲಿ ಇರುವುದು ಸತ್ಯವೇ.
2. ಈ ಸೃಷ್ಟಿ ಎಲ್ಲಕ್ಕೂ ಸತ್ಯವೇ ಮೂಲ.
3. ಸತ್ಯವೇ ಎಲ್ಲಕ್ಕೂ ಆಧಾರ.
4. ಸತ್ಯದಿಂದಲೇ ಎಲ್ಲದರ ಇರುವಿಕೆ.
5. ಸತ್ಯ ಎಂದರೆ ಯಾವಾಗಲೂ ಇರುವುದು...ಅಂದರೆ ಆದಿಯಲ್ಲಿ, ಮಧ್ಯದಲ್ಲಿ, ಅಂತ್ಯದಲ್ಲೂ ಇರುವುದು.
6. ಜಾಗ್ರತೆ ಎಂದರೆ ಎಚ್ಚರ, ಸ್ವಪ್ನ ಎಂದರೆ ಕನಸು, ಸುಷುಪ್ತಿ ಎಂದರೆ ಗಾಢನಿದ್ರೆ ಈ ಮೂರು ಅವಸ್ಥೆಗಳಿಗೆ ಸಾಕ್ಷಿಯಾಗಿ ಇರುವುದೇ ಸತ್ಯ.
7. 'ಅಹಂ' ಎಂದರೆ 'ನಾನು' ಎನ್ನುವ ಜ್ಞಾನಕ್ಕೆ, ಸತ್ಯ ಆಧಾರವಾಗಿದೆ.
8. ಸತ್ಯವೇ ಚಿನ್ಮಯ.. ಅಂದರೆ, ಆನಂದ.
9. ಸತ್ಯವೇ ಜ್ಞಾನ ಅಂದರೆ, ಜ್ಞಾನ ಸ್ವರೂಪ.
10. ಸತ್ಯವೇ ಪ್ರಪಂಚ, ಪ್ರಪಂಚವೇ ಸತ್ಯ.
11. ಎಲ್ಲಾ ಇಂದ್ರಿಯಗಳು ಮಾಡುವ ಕೆಲಸಕ್ಕೆ ಕಾರಣವಾದದ್ದು ಸತ್ಯ.
12. ಪ್ರಕೃತಿ ಪುರುಷರ ಐಕ್ಯ ಸ್ವರೂಪ ಕೂಡಾ ಸತ್ಯವೇ.
13. ಸತ್ಯವು ದ್ರಷ್ಟ. ಅಂದರೆ ನೋಡುವುದು.
14. ಸತ್ಯವೇ ಮನಸ್ಸು, ಬುದ್ಧಿ ಮುಂತಾದವುಗಳಿಗೆ ಚೈತನ್ಯವನ್ನು ಉಂಟುಮಾಡುತ್ತದೆ.
15. ಸತ್ಯವು ಕಾಂತಿ ಸ್ವರೂಪ. ಪ್ರಪಂಚವನ್ನು ಪ್ರಕಾಶಿಸುವಂತೆ ಮಾಡುತ್ತದೆ.
16. ಸತ್ಯವೇ ಸಚ್ಚಿದಾನಂದ ಸ್ವರೂಪ. ಅಂದರೆ ಸತ್ಯವಾದುದ್ದು, ಸತ್–ಚಿತ್–ಆನಂದ. 'ಸತ್' ಎಂದರೆ ಸತ್ಯವಾದುದ್ದು 'ಚಿತ್' ಎಂದರೆ ಚೈತನ್ಯವಂತವಾದದ್ದು. 'ಆನಂದ' ಎಂದರೆ ಆನಂದಯುತವಾದದ್ದು.
17. ಸತ್ಯವು ಅಖಂಡವಾದದ್ದು ಅಂದರೆ ಒಡೆಯದಿರುವುದು. ಅವ್ಯಯ ಎಂದರೆ ಎರಡು ಭಾಗಗಳು ಆಗದಿರುವುದು ಇದೇ ಸತ್ಯದ ರಹಸ್ಯ.
18. ಸತ್ಯ ಇದೆ ಎಂದು ಮಾತ್ರ ತಿಳಿದುಕೊಳ್ಳಬಲ್ಲೆವು. ಹೀಗೆ ಇರುತ್ತದೆ ಎಂದು ಹೇಳಲಾರದ, ಎಲ್ಲಾ ಕಡೆ ಇರುವ ಕೊನೆ ಮೊದಲಿಲ್ಲದ ಕಾಂತಿಮಯ ಶಕ್ತಿ ಅದೇ ಪರಮಾತ್ಮ

# ಶಂಕರಾಚಾರ್ಯರ ಆತ್ಮ ಬೋಧೆ

ಸತ್ಯದ ಕುರಿತು ಅಂದರೆ ಬ್ರಹ್ಮದ ಕುರಿತು ಶಂಕರಾಚಾರ್ಯರ ಆತ್ಮ ಬೋದೆಯ ಮೂಲಕ ಮತ್ತಷ್ಟು ವಿಷಯಗಳನ್ನು ತಿಳಿದುಕೊಳ್ಳೋಣ.

▲ ಯಾವುದರ ಕಾಂತಿಯಿಂದ ಸೂರ್ಯಾದಿಗಳು ಪ್ರಕಾಶಿಸುತ್ತಿರುವರೋ,! ಯಾವುದನ್ನು ಆ ಸೂರ್ಯಾದಿಗಳು ಪ್ರಕಾಶಿಸುವಂತೆ ಮಾಡುತ್ತಿದ್ದಾರೋ,! ಯಾವುದರ ಮೂಲಕ ಸಮಸ್ತವಾದ ಜಗತ್ತು ಪ್ರಕಾಶಿಸುವುದೋ ಅದೇ ಬ್ರಹ್ಮ ಎಂದು ತಿಳಿದುಕೊಳ್ಳಿ.

▲ ಸ್ಥೂಲವಲ್ಲದ್ದು–ಸೂಕ್ಷ್ಮವಲ್ಲದ್ದು, ಉದ್ದವಲ್ಲದ್ದು ಗಿಡ್ಡವಲ್ಲದ್ದು, ಹುಟ್ಟು ಸಾವುಗಳಿಲ್ಲದ್ದು, ಬದಲಾವಣೆ ಯಾಗದಿರುವುದು, ರೂಪ, ಗುಣ, ವರ್ಣ, ನಾಮಗಳು ಇಲ್ಲದ್ದು ಯಾವುದೋ ಅದೇ ಬ್ರಹ್ಮ, ಅದೇ ಸತ್ಯ ಎಂದು ತಿಳಿದುಕೊಳ್ಳಬೇಕು.

▲ ಹಾಲಿನಲ್ಲಿ ಬೆಣ್ಣೆ ವ್ಯಾಪಿಸಿರುವಂತೆ ಬ್ರಹ್ಮತತ್ವವು ಸರ್ವವ್ಯಾಪಕವಾಗಿದೆ ಎಂದು ತಿಳಿದುಕೊಳ್ಳಿ.

▲ "ಈ ಜಗತ್ತಿನ ಒಂದು ಸೃಷ್ಟಿ, ಸ್ಥಿತಿ, ಲಯಾದಿಗಳೆಲ್ಲವೂ ಯಾರಿಂದ ಉಂಟಾಗುತ್ತಿದೆಯೋ ಆತನೇ ಪರಬ್ರಹ್ಮ" ಎಂದು ಬ್ರಹ್ಮ ಸೂತ್ರಗಳಲ್ಲಿ (1–2) ವೇದ ವ್ಯಾಸರುರವರು ವಿವರಿಸಿದ್ದಾರೆ.

▲ ಒಳಗೆ, ಹೊರಗೆ, ಎಲ್ಲದರಲ್ಲೂ ಇದ್ದು, ಎಲ್ಲಾ ದಿಕ್ಕುಗಳು ವ್ಯಾಪಿಸಿರುವ ಸಚ್ಚಿದಾನಂದ ಸ್ವರೂಪ ವಾದದ್ದು, ಎರಡಾಗಿ ಇಲ್ಲದ್ದು, ಆದಿ ಅಂತ್ಯವಿಲ್ಲದ್ದು, ಅನಂತವಾಗಿರುವುದು, ತ್ರಿಕಾಲದಲ್ಲಿ ಇರುವುದು, ಏಕವಾದದ್ದು ಯಾವುದಿದೆಯೋ ಅದೇ ಬ್ರಹ್ಮ ಎಂದು ತಿಳಿದುಕೊಳ್ಳಿ.

▲ ಏನು ನೋಡಿದರೆ ಬೇರೆ ಯಾವುದನ್ನು ನೋಡುವ ಅಗತ್ಯವಿಲ್ಲವೋ, ಯಾವುದನ್ನು ಹೊಂದಿದರೆ, ಮರಳಿ ಜನಿಸಬೇಕಾದ ಅಗತ್ಯ ಇಲ್ಲವೋ! ಯಾವುದನ್ನು ತಿಳಿದುಕೊಂಡರೆ, ಬೇರೆ ಯಾವುದನ್ನು ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲವೋ! ಅದೇ ಪರಬ್ರಹ್ಮ ಎಂದು ತಿಳಿದುಕೊಳ್ಳಿ.

- ಯಾವುದನ್ನು ಹೊಂದಿದರೆ ಬೇರೆ ಯಾವುದನ್ನು ಹೊಂದಬೇಕಾಗಿಲ್ಲವೋ ಯಾವ ಸುಖವನ್ನು ಅನುಭವಿಸಿದ ನಂತರ ಬೇರೆ ಯಾವ ಸುಖವು ಬೇಕಿಲ್ಲವೋ.. ಯಾವ ಜ್ಞಾನವನ್ನು ಹೊಂದಿದ ನಂತರ ಮತ್ತೆ ಯಾವ ಜ್ಞಾನವು ಹೊಂದಬೇಕಾದ ಅಗತ್ಯ ಇಲ್ಲವೂ ಅದೇ ಬ್ರಹ್ಮ ಎಂದು ತಿಳಿದುಕೊಳ್ಳಿ.
- ಅಷ್ಟೇ ಅಲ್ಲ ನಿತ್ಯವಾದದ್ದು, ಶುದ್ಧವಾದದ್ದು, ಮುಕ್ತವಾದದ್ದು, ಏಕವಾದದ್ದು, ಅಖಂಡವಾದ ಆನಂದವುಳ್ಳದ್ದು, ಅಧ್ವಯವಾದದ್ದು, ಸತ್ಯವಾದದ್ದು, ಜ್ಞಾನವುಳ್ಳದ್ದು ಅನಂತವಾದದ್ದು ಯಾವುದು ಇದೆಯೋ ಅದೇ ಬ್ರಹ್ಮ ಎಂದು ತಿಳಿದುಕೊಳ್ಳಿ.
- ಆಕಾಶ ಯಾವ ರೀತಿ ಸರ್ವತ್ರ ವ್ಯಾಪಿಸಿರುವುದೋ ಪರಬ್ರಹ್ಮ ಅದೇ ವಿಧವಾಗಿ ಸರ್ವತ್ರ ವ್ಯಾಪಿಸಿ ಹೊರಗೆ ಒಳಗೆ ತುಂಬಿಕೊಂಡಿದ್ದಾನೆ ಆತ ನಾಶವಿಲ್ಲದವನು ಯಾವಾಗಲೂ ಎಂತಹ ಬದಲಾವಣೆಗಳು ಇಲ್ಲದೆ ಇರುವವನು, ಎಲ್ಲದರಲ್ಲೂ ಸಮದೃಷ್ಟಿಯುಳ್ಳವನು, ಪರಿಶುದ್ಧವಾದವನು, ಯಾವುದರೊಂದಿಗೆ ಬಂಧಗಳು ಇಲ್ಲದವನು, ಯಾವ ವಿಧವಾದ ಮಲಿನಗಳಿಲ್ಲದೆ ಸ್ವಚ್ಛವಾಗಿ ಇರುವವನು, ಅಚಲನಷ್ಟೇ ಅಲ್ಲ ದುಃಖ, ಬಂಧ, ಅಸೂಯೆ, ಭಯದಂತಹ ವಿಕಾರಗಳು ಇಲ್ಲದವನು ಎಂದು ತಿಳಿದುಕೊಳ್ಳಿ.
- ಸೂರ್ಯನಿಗೆ ಪ್ರಕಾಶ, ನೀರಿಗೆ ತಣ್ಣಗೆ ಇರುವುದು, ಬೆಂಕಿಗೆ ಶಾಖವು ಹೇಗೆ ಸ್ವಾಭಾವಿಕವೋ ಹಾಗೆ ಸಚ್ಚಿದಾನಂದ, ಶಾಶ್ವತತ್ವ, ನಿರ್ಮಲತ್ವಗಳು,ಸಹಜಸ್ವಭಾವಗಳು ಎಂದು ತಿಳಿದುಕೊಳ್ಳಿ.
- ಎಲ್ಲದಕ್ಕೂ ಆಧಾರವಾಗಿ, ಸೃಷ್ಟಿಗೆ ಮೂಲ ಕಾರಣವಾದ ಪರಬ್ರಹ್ಮನಲ್ಲಿ... ಪ್ರಪಂಚಗಳು ನೀರಿನಲ್ಲಿ ಗುಳ್ಳೆಯಂತೆ ಹುಟ್ಟಿ ಬೆಳೆದು ನಶಿಸುತ್ತಾ ಇವೆ ಎಂದು ತಿಳಿದುಕೊಳ್ಳಿ.

**ಈ ವಿಧವಾಗಿ ಶ್ರೀ ಆದಿ ಶಂಕರಾಚಾರ್ಯರು ಸತ್ಯದ ಕುರಿತು ಅಂದರೆ ಪರಬ್ರಹ್ಮದ ಹಿರಿಮೆಯನ್ನು ಕುರಿತು ವಿವರಿಸಿದ್ದಾರೆ.**

# ಸತ್ಯದ ಕುರಿತು ಉಪನಿಷತ್ತಿನಲ್ಲಿ ಇರುವ ವಾಕ್ಯಗಳು

1. "ಸತ್ಯಂ ಜ್ಞಾನ ಮನಂತಂ ಬ್ರಹ್ಮ"

   ತಾ :– ಸತ್ಯ, ಅನಂತವಾದ ಜ್ಞಾನವೇ ಬ್ರಹ್ಮ.

2. "ಯಾ ವೇದ, ವಿಹಿತಂ ಗುಹಾಯಾಮ್"

   ತಾ :– ಪ್ರತಿ ವ್ಯಕ್ತಿಯ ಹೃದಯವೆನ್ನುವ ಗುಹೆಯಲ್ಲಿ ನಿಕ್ಷಿಪ್ತವಾಗಿರುವ ಆತ್ಮವೇ ಸತ್ಯ.

3. "ಅಣೋ ರಣೀಯಾನ್ ಮಹಿತೋ ಮಹೀಯಾನ್ ಆತ್ಮ ಗುಹಾಯಾನ್ ರಿಹಿತೋಸ್ಯ ಜನ್ತೋ "

   ತಾ :–ಸತ್ಯವು ಅಣುವಿಗಿಂತ ಚಿಕ್ಕ ಅಣು, ದೊಡ್ಡದು ಎನ್ನುವುದಕ್ಕಿಂತ ಮತ್ತಷ್ಟು ದೊಡ್ಡದು.

4. "ಸದೇನಾ ಸಾಮ್ಯೇ ದಮಗ್ರ ಆಸಿತ್ "

   ತಾ :–ಆದಿಯಲ್ಲಿ ಸತ್ ಪದಾರ್ಥ ಮಾತ್ರವೇ ಇದೆ.

5. "ಏಕಮೇವ ಅದ್ವಿತೀಯಂ ಬ್ರಹ್ಮ"

   ತಾ :–ಬ್ರಹ್ಮ ಒಬ್ಬನೇ, ಎರಡನೆಯದು ಯಾವುದೂ ಇಲ್ಲ

6. "ಸರ್ವಂ ಖಲ್ವಿದಂ ಬ್ರಹ್ಮ "

   ತಾ :–ಎಲ್ಲೆಡೆಯಲ್ಲೂ ಬ್ರಹ್ಮನಿದ್ದಾನೆ.

7. "ಬ್ರಹ್ಮ ವಿದ್ಯೆ ಬ್ರಹ್ಮೇವ ಭವತಿ"

   ತಾ :– ಬ್ರಹ್ಮವೆಂದು ತಿಳಿದುಕೊಂಡವನು ಬ್ರಹ್ಮವೇ ಆಗುತ್ತಿದ್ದಾನೆ.

8. "ಅಪರೂಪ ಮಸ್ಪರ್ಶ ಮಶಬ್ಧ ಮವ್ಯಯಂ"

ತಾ :–ರೂಪವಿಲ್ಲದ್ದು ಸ್ಪರ್ಶವಿಲ್ಲದ್ದು, ಶಬ್ದವಿಲ್ಲದ್ದು.

9. "ಆಹಾದಿಮತ್ ಪರಬ್ರಹ್ಮ ನಸತ್ತನ್ನಾ ಪ್ರದುಚ್ಯತೆ"

ತಾ :–ಇದೆ ಎಂದು,ಇಲ್ಲ ಎಂದು ಹೇಳಲಾಗದ್ದು

10. "ಸೋಽ ಹಂ ಬ್ರಹ್ಮ "

ತಾ :–ಆ ಬ್ರಹ್ಮವೇ ನಾನು

11. "ತಮೇವಾಹಾ"

ತಾ :– ನೀನೆ ನಾನು.. ಅಂದರೆ ಆ ಬ್ರಹ್ಮವೇ ನಾನು.

12. "ಅಹಂ ಬ್ರಹ್ಮಾಸ್ಮಿ"

ತಾ :–ನಾನೇ ಬ್ರಹ್ಮನಾಗಿದ್ದೇನೆ.

## ಭಗವದ್ಗೀತೆಯಲ್ಲಿ

13. **ಶ್ಲೋಕ ॥ ನ ಜಾಯತೆ ಮ್ರಿಯತೆ ವಾ ಕದಾಚಿತ್**

**ನಾಯಂ ಭೂತ್ವಾ ಭವಿತಾ ವಾ ನ ಭೂಯ: ।**

**ಅಜೋಽ ನಿತ್ಯ ಶಾಶ್ವತೋಽಯಂ ಪುರಾಣೊ ನ ಹನ್ಯತೆ**

**ಹನ್ಯಮಾನೆ ಶರೀರೆ ॥ (ಭ. ಗೀ.2–20)**

ತಾ :– ಆತ್ಮ ಅಂದರೆ ಬ್ರಹ್ಮ ಅಂದರೆ ಸತ್ಯ.. ಅದು ಯಾವಾಗಲೂ ಹುಟ್ಟುವುದಿಲ್ಲ ಸಾಯುವುದಿಲ್ಲ ಹುಟ್ಟಿ ಮತ್ತೆ ಹೊಸದಾಗಿ ಇರುವುದಿಲ್ಲ. ಕಾರಣ ಇದು ಜನ್ಮವಿಲ್ಲದ್ದು, ನಿತ್ಯವಾದದ್ದು, ಸನಾತನವಾದದ್ದು, ಪುರಾತನವಾದದ್ದು, ಶರೀರ ಸಾಯಿಸಲ್ಪಟ್ಟರು ಆತ್ಮ ಸಾಯುವುದಿಲ್ಲ.

ಅಂತಹ ಸತ್ಯವನ್ನು ಅಂದರೆ ಆತ್ಮವನ್ನು, ಜ್ಞಾನನೇತ್ರ ಅಂದರೆ ಆತ್ಮಜ್ಞಾನ ಹೊಂದಿದವರೇ ತಿಳಿದುಕೊಳ್ಳಬಲ್ಲರು.

# ಜ್ಞಾನ ನೇತ್ರ

ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಎಂದು ನಾಲ್ಕು ವಿಧಗಳಾಗಿ ಕೆಲಸ ಮಾಡುತ್ತಿರುವ ಮನಸ್ಸನ್ನು ಆತ್ಮದಲ್ಲಿ ಲೀನ ಮಾಡಿಕೊಂಡವರೇ ಜ್ಞಾನ ನೇತ್ರ ಹೊಂದಿದವರು.

ಒಂದು ವಿಧವಾಗಿ ಹೇಳಬೇಕೆಂದರೆ, ಮನಸ್ಸನ್ನು ಶೂನ್ಯ ಮಾಡಿಕೊಂಡವರು... ಅಂದರೆ "ಶ್ವಾಸದ ಮೇಲೆ ಗಮನವಿರಿಸಿ" ಧ್ಯಾನ ಮಾಡಿದವರೇ ಜ್ಞಾನ ನೇತ್ರವನ್ನು ಸಂಪಾದಿಸಿಕೊಳ್ಳಬಲ್ಲರು ಅವರನ್ನು ಆತ್ಮಜ್ಞಾನಿಗಳು ಎನ್ನುತ್ತಾರೆ.

ಆದ್ದರಿಂದ ಆತ್ಮಜ್ಞಾನ ಉಂಟಾದಾಗಲೇ ಮಾನವ ಜೀವನ ಸಂಪೂರ್ಣವಾಗುತ್ತದೆ. ಅಷ್ಟೇ ಹೊರತು,ನೂರು ವರ್ಷಗಳು ಬದುಕಿದರೆ ಜೀವನ ಸಂಪೂರ್ಣ ಆಗುವುದಿಲ್ಲ.

ಪತ್ರೀಜಿಯವರು ಇನ್ನೂ ಏನು ಹೇಳಿದ್ದಾರೆಂದರೆ? ಎಷ್ಟು ಜನ್ಮಗಳು ಎತ್ತಿದರು ಎಲ್ಲರೂ ಅಸತ್ಯದಲ್ಲಿ ಜೀವಿಸುತ್ತಿದ್ದಾರೆ ಹಾಗೆ ಎಷ್ಟು ಜನ್ಮಗಳು ತೆಗೆದುಕೊಳ್ಳುತ್ತೇವೆ? ಯಾರಾದರೂ ಸರಿಯೇ ಸತ್ಯದಲ್ಲಿ ಜೀವಿಸಿದರೆ ಮಾತ್ರ ಮೋಕ್ಷ ಎಂದಿದ್ದಾರೆ.

ಅಷ್ಟೇ ಅಲ್ಲ ಸತ್ಯ ತಿಳಿದುಕೊಳ್ಳಬಲ್ಲ, ಸತ್ಯದಲ್ಲಿ ಜೀವಿಸಬಲ್ಲ ಜನ್ಮವು ಉನ್ನತವಾದ ಜನ್ಮ ಎಂದು ಪತ್ರೀಜಿ ಹೇಳಿದ್ದಾರೆ.

ಆದ್ದರಿಂದ ಸತ್ಯವನ್ನು ಅಂದರೆ,ಆತ್ಮವನ್ನು ಆಶ್ರಯಿಸೋಣ. ಆ ಮಾರ್ಗವೇ ಪತ್ರೀಜಿ ನಮ್ಮೆಲ್ಲರಿಗೂ ನೀಡಿದ "ಶ್ವಾಸದ ಮೇಲೆ ಗಮನ ಧ್ಯಾನ".

ಪತ್ರಿಜಿಯವರು ಇನ್ನೂ ಏನು ಹೇಳಿದ್ದಾರೆಂದರೆ, ಶ್ರೀ ಕೃಷ್ಣನು ನಾಲ್ಕನೇ ವಯಸ್ಸಿನಲ್ಲಿ ಧ್ಯಾನ ಕಲಿತುಕೊಂಡನು, ಶ್ರೀರಾಮನು ಹತ್ತು ವರ್ಷ ವಯಸ್ಸಿನಲ್ಲಿ ಧ್ಯಾನ ಕಲಿತುಕೊಂಡನು, ಆಂಜನೇಯ ಸ್ವಾಮಿ ತನ್ನ ಎರಡನೇ ವಯಸ್ಸಿನಲ್ಲಿ ಧ್ಯಾನ ಕಲಿತುಕೊಂಡನು. ಆದ್ದರಿಂದ ನಾವು ಕೂಡ ಸತ್ಯವನ್ನು ಆಶ್ರಯಿಸೋಣ ಅಂದರೆ "ಶ್ವಾಸದ ಮೇಲೆ ಗಮನ ಇರಿಸಿ" ಧ್ಯಾನ ಮಾಡೋಣ ಸತ್ಯವನ್ನು ತಿಳಿದುಕೊಳ್ಳೋಣ ಸತ್ಯದಲ್ಲಿ ಜೀವಿಸೋಣ ಸತ್ಯದಲ್ಲಿ ಜೀವಿಸುವುದೆಂದರೆ? ನಾನು

ಆತ್ಮ ಎನ್ನುವಂತೆ ಜೀವಿಸಬೇಕು. ಅಷ್ಟೇ ಅಲ್ಲ ಸತ್ಯದ ಕುರಿತು ಮತ್ತಷ್ಟು ತಿಳಿದುಕೊಳ್ಳೋಣ.

1. ಸತ್ಯ ಎಂದರೆ, ನಿತ್ಯವಾದದ್ದು, ಶಾಶ್ವತವಾದದ್ದು, ನಾಶವಾಗದ್ದು, ಯಾವಾಗಲೂ ಇರುವುದು, ಬದಲಾವಣೆ ಹೊಂದಲಾರದ್ದು, ಕಾಲ ಬದಲಾದರೂ ಬದಲಾಗದಿರುವುದು ಎಂದು ತಿಳಿದುಕೊಂಡೆವು. ಅಂದರೆ ಹುಟ್ಟುವುದಿಲ್ಲ, ಬೆಳೆಯುವುದಿಲ್ಲ, ಬದಲಾವಣೆ ಹೊಂದುವುದಿಲ್ಲ, ಕ್ಷಯಿಸುವುದಿಲ್ಲ, ಅಂದರೆ ಕ್ಷೀಣಿಸುವುದಿಲ್ಲ, ಕರಗುವುದಿಲ್ಲ, ನಶಿಸುವುದಿಲ್ಲ. ಅದೇ "ಆತ್ಮ...." ಅಂದರೆ "ಭಗವಂತ".

2. ಸತ್ಯ ಗ್ರಂಥಗಳಲ್ಲಿ ಸಿಗುವುದಿಲ್ಲ, ಸತ್ಯವನ್ನು ತಿಳಿದುಕೊಳ್ಳಬೇಕೆಂದರೆ, "ಶವ ದೃಷ್ಟಿಯನ್ನು" ಬಿಟ್ಟು "ಶಿವ ದೃಷ್ಟಿಯನ್ನು" ಅಳವಡಿಸಿಕೊಳ್ಳಬೇಕು. ಅಂದರೆ "ದೇಹದ ದೃಷ್ಟಿಯನ್ನು ಬಿಟ್ಟು" "ಆತ್ಮದೃಷ್ಟಿಯನ್ನು" ಅಳವಡಿಸಿಕೊಳ್ಳಬೇಕು.

3. ಸತ್ಯ ಪ್ರಯಾಣ ಅಂಗಾಲಿನಿಂದ ಶುರುವಾಗಿ ತಲೆ ಮೇಲ್ಭಾಗದಲ್ಲಿ ಮುಗಿಯುತ್ತದೆ

4. ಸತ್ಯದ ಹಿರಿಮೆ "THERE IS NO RELIGION HIGHER THAN TRUTH" "ಸತ್ಯಕ್ಕಿಂತ ಉನ್ನತವಾದ ಮತವಿಲ್ಲ."

5. ಸತ್ಯ ಅನುಭವಕ್ಕೆ ಬಂದರೆ?

ಎಲ್ಲರೂ ಎಲ್ಲವೂ ಒಂದೇ,ಅಂದರೆ "ಎಲ್ಲಾ ನಾನೇ – ನಾನೇ ಎಲ್ಲಾ" ಎನ್ನುವಂತೆ ಜೀವಿಸಿದರೆ ಸತ್ಯವನ್ನು ತಮ್ಮ ಅನುಭವಕ್ಕೆ ತಂದುಕೊಂಡಂತೆ.

6. ಜಯವಾಗಲಿ, ಅಪಜಯವಾಗಲಿ ಸಮಾನವಾಗಿ ತೆಗೆದುಕೊಳ್ಳುವುದೇ ಸತ್ಯದಲ್ಲಿ ಜೀವಿಸಿದಂತೆ ಏಕೆಂದರೆ ಸತ್ಯಕ್ಕೆ ಕೂಡಾ "ಸವಿಯಾದ ಪೆಟ್ಟು ತಪ್ಪುವುದಿಲ್ಲ".

ಅಂದರೆ ಸತ್ಯವನ್ನು ಆಶಯಿಸಿದವರಿಗಾದರೂ, ಸತ್ಯಮಾರ್ಗದಲ್ಲಿ ಪ್ರಯಾಣಿಸುವವರಿಗಾದರೂ, ಸತ್ಯದಲ್ಲಿ ಜೀವಿಸುವವರಿಗಾದರೂ ಕಷ್ಟಗಳು ತಪ್ಪುವುದಿಲ್ಲ.

# ಸತ್ಯವನ್ನು ಹೊಂದಿದರೆ?

ಸತ್ಯವನ್ನು ಹೊಂದದ ಹೊರತು, ಅಸ್ತಿಕನಾಗಿದ್ದರೂ ಅವನು ನಾಸ್ತಿಕನೇ. ಸತ್ಯವನ್ನು ಹೊಂದಿದ ನಾಸ್ತಿಕನಾಗಿದ್ದರೂ ಅವನು ಆಸ್ತಿಕನೇ, ಸಜ್ಜನ ಸಾಂಗತ್ಯದಲ್ಲಿ ಒಣಗಿದ ರೊಟ್ಟಿಯನ್ನು ತಿನ್ನಬೇಕಾಗಿ ಬಂದರೂ, ಅದು ಪರಮಾನ್ನ. ಮಧುರ ಪಧಾರ್ಥಗಳಿಗಿಂತ ಅದು ಎಷ್ಟೋ ಪಟ್ಟು ಹೆಚ್ಚಾದ ತಿನಿಸು ಎಂದು ತಿಳಿದುಕೊಳ್ಳಬೇಕು.

ಸತ್ಯವನ್ನು ಅಂದರೆ, ಭಗವಂತನನ್ನು.. ಆತ್ಮವನ್ನು ಆಶ್ರಯಿಸದೆ ಅಸತ್ಯವಾದ ಯಾವುದನ್ನು ಆಶ್ರಯಿಸಿದರೂ ಅಂದ್ರೆ ಫೋಟೋ ಆಗಲಿ, ವಿಗ್ರಹವನ್ನು ಆಗಲಿ ಗಿಡಗಳನ್ನು, ಪಕ್ಷಿಗಳನ್ನು, ಪ್ರಾಣಿಗಳನ್ನು, ಮಾನವರನ್ನು, ಮನಸ್ಸನ್ನು, ಮ್ಯಾಜಿಕ್ ಹೀಗೆ ಯಾವುದನ್ನು ಆಶ್ರಯಿಸಿದರೂ, ಭಗವಂತನ ಶಕ್ತಿಗಳು ಯಾವುದೂ ಬರುವುದಿಲ್ಲ.

ಅದು ಹೇಗೆಂದರೆ? ಬೆಂಕಿಯನ್ನು ಆಶ್ರಯಿಸದೆ ಬೆಂಕಿ ಇರುವ ಚಿತ್ರವನ್ನು ಆಶ್ರಯಿಸಿದಂತೆ.. ಚಿತ್ರದಿಂದ ಬಿಸಿತಟ್ಟುವುದಿಲ್ಲ, ಚಳಿಯೂ ಹೋಗುವುದಿಲ್ಲ.

ಅದಕ್ಕೆ ಜ್ಞಾನಿಗಳೊಂದಿಗೆ ಇದ್ದ ಮಾತ್ರಕ್ಕೆ ಜ್ಞಾನವು ಬರುವುದಿಲ್ಲ ಎಂದು ಹೇಳುತ್ತಾರೆ. ಆದರೆ ಆ ಜ್ಞಾನಿಗಳು ಹೇಳಿದಂತೆ ಸತ್ಯವನ್ನು ಆಶ್ರಯಿಸಿದರೆ, ನೀವು ಜ್ಞಾನಿಗಳಾಗುತ್ತೀರಾ.

ಸತ್ಯದಲ್ಲಿ ಜೀವಿಸುವವರು ಹಾಯಾಗಿರುತ್ತಾರೆ, ಅಸತ್ಯದಲ್ಲಿ ಜೀವಿಸುವವರು ದುಃಖದಲ್ಲಿರುತ್ತಾರೆ.

ಕೆಲವರು ಯಾವಾಗಲೂ ಪೂಜೆಗಳು, ವ್ರತಗಳು, ಜಪಗಳು ಮಾಡುತ್ತಾರೆ. ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ ಆದರೆ ಸತ್ಯವನ್ನು ತಿಳಿದುಕೊಳ್ಳುವುದಿಲ್ಲ ಅಂತಹವರು ಕೂಡಾ ಅಜ್ಞಾನಿಗಳೇ. ತಾಯಿಯಾಗುವುದು ದೊಡ್ಡದಲ್ಲ ತಾಯಿಯಾಗಿ ಜೀವಿಸುವುದು ದೊಡ್ಡದು.

# ಆತ್ಮ ವಿಚಾರಣೆ

## (ಸತ್ಯವಿಚಾರಣೆ)

ನೇತಿ..ನೇತಿ... ಅಂದರೆ ಇದು ಅಲ್ಲ ಇದಲ್ಲ... ಎಂದು ವಿಚಾರಣೆ ಮಾಡುತ್ತಿರಬೇಕು. ಅಗ ಯಾವುದನ್ನು ದೂರವಾಗಿಸಲು ಅವಕಾಶವಿಲ್ಲವೋ ಅದೇ ಆತ್ಮ ಎಂದು ತಿಳಿದುಕೊಳ್ಳಬೇಕು.

ಅಂದರೆ ಆತ್ಮ ಎಂದರೇನು? ಅನಾತ್ಮ ಎಂದರೇನು? ಎನ್ನುವುದನ್ನು ತಿಳಿದುಕೊಳ್ಳಬೇಕು. ಹುಲ್ಲನ್ನು ಬೇರಿನಿಂದ ಬೇರೆ ಮಾಡಿದಂತೆ, ಆತ್ಮವನ್ನು ಪಂಚಕೋಶಗಳಿಂದ ಬೇರ್ಪಡಿಸಬೇಕು. ಹಾಗೇ ಸ್ವಪ್ರಕಾಶ ಚೈತನ್ಯದಿಂದ ನೀನು ಐಕ್ಯವಾಗಬೇಕು. ಅಗ ಉಳಿದಿರುವುದೆಲ್ಲ ನಿನ್ನ ವೈಭವವೇ...

ನಿತ್ಯವಾದ ವಸ್ತು ಸತ್ಯವಾಗಿರುತ್ತದೆ, ಅದೇ ಆತ್ಮ. ಅದಕ್ಕೆ ಹೊರತಾದದ್ದೆಲ್ಲ ಮಾಯೆಯಾಗಿರುತ್ತದೆ. ಅನಾತ್ಮವೇ. ಈ ವಿಧವಾಗಿ ಗ್ರಹಿಸುವುದೇ "ಆತ್ಮನಾತ್ಮ ವಿವೇಕ ಜ್ಞಾನ" ಎನ್ನುತ್ತಾರೆ. ಇಲ್ಲಿ ಎರಡು ವಿಷಯಗಳನ್ನು ಪರಿಶೀಲಿಸಬೇಕು.. ಮೊದಲನೆಯದು ನಮಗೆ ಗೋಚರಿಸುವ ಪ್ರಪಂಚ. ಎರಡನೆಯದು ಅದನ್ನು ಗ್ರಹಿಸುವ ನಾವು.

ದೃಶ್ಯಮಾನ ಜಗತ್ತಿಗೆ ಯಾವ ವಿಧವಾದ ಅಸ್ತಿತ್ವವು ಇಲ್ಲ. ಅದು ನೋಡುವವರ ಮನಸ್ಸಿಗಿಂತ ಬೇರೆಯಾಗಿರುವುದಿಲ್ಲ.ಪಾರಮಾರ್ಥಿಕಸತ್ಯವಾದ ಆತ್ಮವೇ ಸತ್ಯ. ಅಂತಹ ಪಾರಮಾರ್ಥಿಕ ಸ್ಥಾಯಿಯಲ್ಲಿ ಸಂಕಲ್ಪಗಳು ನಡೆಯುವ ಆಸ್ಪದವಿಲ್ಲದಿರುವುದರಿಂದ ಅಲ್ಲಿ ದ್ವೈತ ಪ್ರಪಂಚ ತಿಳಿಯುವ ಅವಕಾಶವಿರುವುದಿಲ್ಲ. ಸತ್ಯವಾದ ಆತ್ಮ ಮತ್ತೊಂದರ ಮೇಲೆ ಆಧಾರ ಪಡುವುದಿಲ್ಲ. ಬೇರೆ ಯಾವುದೂ ಇಲ್ಲದಿರುವ ಸ್ಥಿತಿಯೇ, ಆತ್ಮವಾದ್ದರಿಂದ ದ್ವೈತವು ಅನೂಹ್ಯವಾದದ್ದು. ಇಂತಹ ಅದ್ವೈತ ಜ್ಞಾನವನ್ನು ತಿಳಿದುಕೊಳ್ಳುವುದರಿಂದ ಆತ್ಮದ ಇರುವಿಕೆ ಅನುಭವಕ್ಕೆ ಬರುತ್ತದೆ.

“ಇತರ ವಿದ್ಯೆಯ ಪರಿಜ್ಞಾನ ಅಶಾಶ್ವತವಾದದ್ದು. ಆದರೆ ಬ್ರಹ್ಮದ ಪರಿಜ್ಞಾನದಿಂದ ಬ್ರಹ್ಮನನ್ನೇ ಹೊಂದುವುದು ಜರುಗುತ್ತದೆ.”

# ಆತ್ಮನಾತ್ಮ ವಿವೇಕ

ಆತ್ಮನಾತ್ಮ ವಿವೇಕದಿಂದ ಆತ್ಮ ಸತ್ಯ ಎಂದು ತಿಳಿಯುತ್ತದೆ. ಅದಕ್ಕೆ ವಿರುದ್ಧವಾದದ್ದೆಲ್ಲ ಮಾಯೆ ಎಂದು ತಿಳಿಯುತ್ತದೆ. ಅಂತಹ ಮಾಯಾರೂಪಗಳೇ ಪಂಚಕೋಶಗಳು. ಅದರಿಂದ ಬೇರ್ಪಟ್ಟವನೇ ಮುಕ್ತ ಪುರುಷನಾಗುತ್ತಾನೆ.

ಮಾಯಾರೂಪವಾದ ಅನಾತ್ಮದಲ್ಲಿ ತಿಳಿಯುವುದು ಮಾಯಾ ಲಕ್ಷಣಗಳೆ ಆದುದ್ದರಿಂದ ಅಲ್ಲಿ ಭಿನ್ನತ್ವಕ್ಕೆ ಸ್ಥಳವಿಲ್ಲ. ಈ ಸತ್ಯವನ್ನು ವಿಚಾರಣಾ ಪೂರ್ವಕವಾಗಿ ಗ್ರಹಿಸಿದ ವ್ಯಕ್ತಿ ಪಂಚಕೋಶಗಳಿಂದ ಬೇರ್ಪಡುತ್ತಿದ್ದಾನೆ.

ದೃಶ್ಯವಸ್ತು, ದ್ರಷ್ಟಕ್ಕಿಂತ ಬೇರೆ.. ದೃಶ್ಯವುಳ್ಳ ದೇಹವು, ದ್ರಷ್ಟ ಆದ ಆತ್ಮವಾಗಲು ಆಸ್ಪದವಿಲ್ಲ. ಆದ್ದರಿಂದ ಆತ್ಮವು ಅನ್ನಮಯ ಕೋಶವಾದ ಶರೀರವಾಗಲು ಸಾಧ್ಯವಿಲ್ಲ.

ಆತ್ಮ ಅನಂತವಾದುದರಿಂದ ಅಪರಿಮಿತವಾದದ್ದು. ದೇಹವು ಚಲಿಸುವ ಕಾರಣದಿಂದ ಪ್ರಾಣವು ದೇಹಕ್ಕೆ ಪರಿಮಿತವಾಗಿರುವುದರಿಂದ ಪರಿಮಿತವಾದ ಪ್ರಾಣವು ಅಪರಿಮಿತ ಆತ್ಮ ಆಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆತ್ಮ ಪ್ರಾಣಮಯ ಕೋಶವಾಗಲಾರದು.

ಜಡವಸ್ತುವಾದ ಚೈತನ್ಯಕ್ಕಿಂತ ಅನ್ಯವಾದ್ದದ್ದು ಆದ್ದರಿಂದ ಜಡ ರೂಪವಾದ ಮನಸ್ಸು ಚೈತನ್ಯವಂತವಾದ ಆತ್ಮ ಅಗಲಾರದು. ಆದ್ದರಿಂದಲೇ ಆತ್ಮ ಮನೋಮಯ ಕೋಶವಾಗಲು ಸಾಧ್ಯವಿಲ್ಲ.

ನಿಶ್ಚಯಾತ್ಮಕವಾದ ಬುದ್ಧಿಯೇ ವಿಜ್ಞಾನ ಮಯಕೋಶವೆಂದು ತಿಳಿಯುತ್ತಿದೆ. ಆದರೆ ನಿಶ್ಚಿತಾನಿಶ್ಚಿತಗಳು ಎರಡನ್ನು ಪ್ರಕಾಶಿಸುವಂತೆ ಮಾಡುವ ಆತ್ಮ ಎರಡರಲ್ಲೂ ಯಾವುದೋ ಒಂದು ಆಗಲು ಅವಕಾಶವಿಲ್ಲದರಿಂದ ಆತ್ಮ ವಿಜ್ಞಾನಮಯ ಕೋಶವಾಗಲು ಸಾಧ್ಯವಿಲ್ಲ.

ಸುಷುಪ್ತಿಯೇ ಆನಂದ ಮಯಕೋಶ ಅದೊಂದು ಅಜ್ಞಾನದ ಆವರಣ ಅಜ್ಞಾನವು ಇದೆಯೆಂದು ಗ್ರಹಿಸುವುದು ಆತ್ಮವಾಗಿ ಇರುವುದರಿಂದಲೇ ಗ್ರಹಿಸುವಿಕೆ ಸಾಧ್ಯವಾಯಿತು. ಅಜ್ಞಾನವನ್ನು ಗ್ರಹಿಸುವುದಕ್ಕಿಂತ ಅನ್ಯವಾಗಿರುವುದರಿಂದ ಆತ್ಮ ಆನಂದಮಯಕೋಶ ಆಗುವುದಿಲ್ಲ. ಈ ಪಂಚ ಕೋಶಗಳಿಗೆ ಆಧಾರವಾಗಿ, ಯಾವುದು ಬೇರೆಯಾಗಿ ಇದೆಯೋ ಅದೇ ಆತ್ಮ.

ಆ ಆತ್ಮವೇ ಸತ್ ಈ ಆತ್ಮವನ್ನು ತಿಳಿದುಕೊಳ್ಳುವ "ಚಿತ್" ಆದ ನೀನು ಯಾರು? ಸತ್ ಗಿಂತ ಚಿತ್ ಬೇರೆಯಾಗಿ ಇದೆಯೇ?

**"ಸತ್ ಯಹಿ ಚಿತ್**

**ಚಿತ್ ಯಾ ಹ್ಯಾಹಂ"**

"ಸತ್..ಚಿತ್ ಆಗಲು, ಆ ಚಿತ್ ನೀನಾಗಿರುವೆ "ಎಂದು ರಮಣ ಮಹರ್ಷಿ ಉಪದೇಶಸಾರ ಗ್ರಂಥದಲ್ಲಿ ತಿಳಿಸಿದ್ದಾರೆ. ಆದ್ದರಿಂದ ಆತ್ಮನಾತ್ಮ ವಿವೇಕ ಜ್ಞಾನವನ್ನು ಹೊಂದಿ, ಅನಾತ್ಮವಾದ ಪಂಚಕೋಶ ಗಳನ್ನು ಬೇರ್ಪಡಿಸಿ ನೋಡಿದಾಗ ಯಾವುದು ಇದೆಯೋ ಅದೇ ಸ್ವಪ್ರಕಾಶವಾದ ಚೈತನ್ಯ ಆತ್ಮ ಅದೇ ನೀನು ಎಂದು ತಿಳಿದುಕೊಳ್ಳಬೇಕು.


**ಶ್ರೀ ರಾಮಧಾಮ ಧ್ಯಾನಕೇಂದ್ರದಲ್ಲಿ**

## ಆತ್ಮಜ್ಞಾನ ಶಿಕ್ಷಣ ಶಿಬಿರ ಕಾರ್ಯಕ್ರಮಗಳು

* ಪ್ರತಿ ಸೋಮವಾರ ಸಂಜೆ 6.00 ರಿಂದ 8.30 ರವರೆಗೆ ಧ್ಯಾನ ತರಗತಿಗಳು ನಡೆಯುತ್ತವೆ.
* ಹುಣ್ಣಿಮೆ ಹಾಗೂ ಅಮಾವಾಸ್ಯೆ ಧ್ಯಾನ
* ಪ್ರತಿ ಆರು ತಿಂಗಳಿಗೊಮ್ಮೆ ಆತ್ಮಜ್ಞಾನ ಶಿಕ್ಷಣ ಶಿಬಿರ ಉಚಿತವಾಗಿ ನಡೆಯುತ್ತದೆ ಇದರ ವಿವರಗಳನ್ನು ಧ್ಯಾನ ಕಸ್ತೂರಿಯಲ್ಲಿ ಹಾಗೂ ಪಿಎಂಸಿ ಕನ್ನಡ ಚಾನೆಲ್‌ನಲ್ಲಿ ಪ್ರಕಟಿಸಲಾಗುವುದು.

# ಸದಾನಂದ ಯೋಗಿ ಹೇಳಿದ್ದು

**ಸದಾನಂದ ಯೋಗಿ ಏನು ಹೇಳಿದ್ದಾರೆ ಎಂದರೆ?**

ಬಯಸಿ ಸಾಧಿಸಲು ಬಾರದು ಬಯಸಿದ್ದು ಬಂದಾಗ ಬೇಡವೆನ್ನಲು ಬಾರದು. ಬರುತ್ತಿರುವುದನ್ನು ನೋಡಿ ಸಂಭ್ರಮ ಪಡಬಾರದು, ಅದು ಹೋಗುತ್ತಿರುವಾಗ ದುಃಖಿಸಬಾರದು "ಎಂದಿದ್ದಾರೆ.

ಅಂದರೆ ಇಲ್ಲದ್ದನ್ನು ಕೋರಬಾರದು, ಇರುವುದನ್ನು ಬೇಡವೆನ್ನಬಾರದು, ಬರುತ್ತಿರುವುದನ್ನು ನೋಡಿ ಸಂಭ್ರಮಿಸಬಾರದು, ಹೋಗುತ್ತಿರುವುದನ್ನು ನೋಡಿ ನೋವು ಪಡಬಾರದು ಎಂದು ತಿಳಿದುಕೊಳ್ಳಬೇಕು.

ಇದಕ್ಕೆ ಇನ್ನೊಂದು ಅರ್ಥವೇನು? ಎಂದರೆ ಅಸತ್ಯವನ್ನು ಕೋರಬಾರದು ಅಂದರೆ ದೇಹಕ್ಕೆ ಪ್ರಾಮುಖ್ಯತೆಯನ್ನು ಕೊಡಬಾರದು. ಇರುವ ಸತ್ಯವನ್ನು ಬೇಡ ಎನ್ನಬಾರದು ಅಂದರೆ ಇರುವ ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಕಾರಣ ಅಸತ್ಯವಾದ ನಿನ್ನ ಶರೀರ ನಿಷ್ಕ್ರಮಿಸುತ್ತದೆ. ಆದರೆ ಸತ್ಯವಾದ ಆತ್ಮ ಯಾವಾಗಲೂ ಇರುತ್ತದೆ.

ಆದ್ದರಿಂದ ಬಂದು ಹೋಗುವುದನ್ನು ಕುರಿತು ಆಲೋಚಿಸಬಾರದು, ಇರುವುದರ ಕುರಿತು ಆಲೋಚಿಸು ಎಂದು ಹಿರಿಯರು ಹೇಳುತ್ತಾರೆ.

ಪುನರ್ಜನ್ಮ ಸಿದ್ಧಾಂತ ತಿಳಿದುಕೋ, ಆತ್ಮವಾದ ನೀನು ಒಂದು ದಿನ ಶರೀರವನ್ನು ಬಿಡುವೆ ಅಂದರೆ ಮರಣಿಸುವೆ ಮತ್ತೆ ಹೊಸ ಶರೀರವನ್ನು ಧರಿಸುವೆ ಅಂದರೆ ಜನಿಸುವೆ. ಇದಕ್ಕಾಗಿ ಅಳಬಾರದು ಅತ್ತರೆ ಅದು ಮೂರ್ಖತ್ವ ನೀನು ಮರಣಿಸಿದರೆ ಮತ್ತೆ ಹುಟ್ಟುವೆ ಅಲ್ಲವೇ ಮತ್ತೇಕೆ ದುಃಖ? ಆತ್ಮ ಯಾವಾಗಲೂ ಇರುತ್ತದೆ. ಆ ಸತ್ಯವನ್ನು ಮರೆತು ನೀನು ಏಕೆ ದುಃಖ ಪಡುತ್ತಿರುವೆ?

ಪುನರ್ಜನ್ಮದ ಕುರಿತು ನಾಸ್ತಿಕತೆ ಒಪ್ಪಿಕೊಳ್ಳುವುದಿಲ್ಲ ಮರಣವನ್ನು ಮಾತ್ರ ಒಪ್ಪಿಕೊಳ್ಳುತ್ತಾರೆ. ಆದರೆ ಪುನರ್ಜನ್ಮ ಒಪ್ಪಿಕೊಳ್ಳುವುದಿಲ್ಲ. 1930ರಲ್ಲಿ ಒಂದು ಹೆಣ್ಣು ಮಗು ನನ್ನ ಗಂಡ ಇಂಥಹ ಕಡೆ ಇದ್ದಾನೆ ಎಂದು ಮತ್ತು ತನ್ನ ಮಕ್ಕಳು ಕುರಿತು ಕೂಡಾ, ಅವರು ಯಾವ ಊರಿನಲ್ಲಿ ಇದ್ದಾರೆ ಎಂದು ಹೇಳಿದಳು. ಆಕೆ ಹೇಳಿದ್ದನ್ನು ತನಿಖೆ ಮಾಡಿದಾಗ ಅವಳು ಹೇಳಿದ ಊರಿನಲ್ಲಿ ಸ್ಥಳದಲ್ಲಿ ಒಬ್ಬ ವೃದ್ಧ

ಅವರ ಮಕ್ಕಳು ಇದ್ದರು. ಆಕೆ ಹೆಸರು ಶಾಂತಿ ದೇವಿ ಇಂತಹ ಲೆಕ್ಕವಿಲ್ಲದಷ್ಟು ಇವೆ ಎಂದು ಪತ್ರೀಜಿ ಹೇಳುತ್ತಿರುತ್ತಾರೆ.

ಅಭಿಮನ್ಯು ಮರಣಿಸಿದ ನಂತರ ಅರ್ಜುನನಿಗೆ ದುಃಖವಾಯಿತು, ಕೃಷ್ಣನನ್ನು ಕುರಿತು ನಿನಗೆ ಇದೆಲ್ಲಾ ತಿಳಿದೇ ನಡೆಯುತ್ತಿದೆ ನನ್ನ ಮಗ ನಿನ್ನಿಂದಲೇ ಮರಣ ಹೊಂದಿದನು ಎಂದು ಹೇಳುತ್ತಾನೆ. ಏಕೆಂದರೆ,ಇಲ್ಲಿ ಅರ್ಜುನನು ಕೂಡ ಅಸತ್ಯವಾಗಿಯೇ ಪ್ರವರ್ತಿಸುತ್ತಾನೆ. ಇರುವ ಸತ್ಯವನ್ನು ದೂರ ಸರಿಸುವುದೇ ದುಃಖಕ್ಕೆ ಕಾರಣ ಸತ್ಯವನ್ನು ಬಿಟ್ಟು ಬದುಕುವುದೇ ಪ್ರಾಪಂಚಿಕತೆ, ಸತ್ಯದಲ್ಲಿ ಪ್ರವೇಶಿಸಿ ಬದುಕುವುದೇ ಆಧ್ಯಾತ್ಮಿಕತೆ. ಎಷ್ಟು ಜನ್ಮಗಳು ಎತ್ತಿದರು ಕೆಲವರು ಅಸತ್ಯದಲ್ಲಿಯೇ ಜೀವಿಸುತ್ತಾರೆ... ಅಸತ್ಯದಿಂದ ದೂರವಾಗಬೇಕೆಂದರೆ ಪ್ರತಿಯೊಬ್ಬರೂ ಶ್ವಾಸದ ಮೇಲೆ ಗಮನವಿಟ್ಟು ಧ್ಯಾನ ಮಾಡಲೇಬೇಕು.

ಮನುಷ್ಯನಿಗೆ ಸಾವು ಇರುತ್ತದೆ ಹೊರತು ಆತ್ಮಕ್ಕೆ ಸಾವು ಇರುವುದಿಲ್ಲ. ಎಲ್ಲರೂ ಅದನ್ನು ಮರೆತು ಹೋಗುತ್ತಿದ್ದಾರೆ. ಅದು ಅನಾಧ್ಯಾತ್ಮಿಕತೆ.

ಯಕ್ಷ ಪ್ರಶ್ನೆಯಲ್ಲಿ ಬರುವಾಗ ಒಂದು ಪ್ರಶ್ನೆ ಏನೆಂದರೆ ಪ್ರಪಂಚದಲ್ಲಿ ಎಲ್ಲಕ್ಕಿಂತಲೂ ಆಶ್ಚರ್ಯಕರವಾದ ವಿಷಯವೇನು?ಎಂದು ಯಕ್ಷನು ಕೇಳುತ್ತಾನೆ ಆಗ ಧರ್ಮರಾಜ "ಸುತ್ತಮುತ್ತಲು ಎಲ್ಲರೂ ಸಾಯುತ್ತಿದ್ದರು, ತಾನು ಮಾತ್ರ ಸಾಯುವುದಿಲ್ಲ ಎಂದು ಪ್ರತಿ ಮನುಷ್ಯ ಅಂದುಕೊಳ್ಳುತ್ತಾನೆ. ಇದೇ ಆಶ್ಚರ್ಯಕರವಾದ ವಿಷಯ" ಎಂದು ಧರ್ಮರಾಜ ಹೇಳುತ್ತಾನೆ.

ಪ್ರತಿಯೊಬ್ಬರೂ ಸಾಯಲೇ ಬೇಕು ಈ ಮೌಲಿಕ ಸತ್ಯವನ್ನು ಗುರುತಿಸಿದ ದಿನವೇ ಆಧ್ಯಾತ್ಮಿಕ ಧೈರ್ಯವನ್ನು, ಆನಂದವನ್ನು ತರುತ್ತದೆ. ಪ್ರತಿಯೊಬ್ಬರೂ ಲೋಕದಲ್ಲಿ ಎಲ್ಲೂ ಇಲ್ಲದ ಕಷ್ಟಗಳು ನನಗೆ ಬಂದಿವೆ ಎಂದುಕೊಳ್ಳುತ್ತಾರೆ. ಅದು ದೊಡ್ಡ ಮೂರ್ಖತ್ವ, ಅಸತ್ಯ

ಸತ್ಯದಲ್ಲಿ ಜೀವಿಸುವವರು ಎಷ್ಟು ಕಷ್ಟಗಳು ಬಂದರೂ ಹಾಯಾಗಿ ಜೀವಿಸುತ್ತಾರೆ. ಅಸತ್ಯದಲ್ಲಿ ಜೀವಿಸುವವರು ಯಾವಾಗಲೂ ದುಃಖಿಸುತ್ತಾರೆ. ಆಧ್ಯಾತ್ಮಿಕತೆ ಎಂದರೆ ಸತ್ಯದಲ್ಲಿ ಜೀವಿಸುವುದು ಪ್ರಾಪಂಚಿಕತೆ ಎಂದರೆ ಸತ್ಯವನ್ನು ಪಕ್ಕಕ್ಕೆ ಸರಿಸಿ ಜೀವಿಸುವುದು. ಸಾವು ಎನ್ನುವುದು ಹುಟ್ಟಿನೊಂದಿಗೆ ಸಾಧ್ಯ

ಹುಟ್ಟಿದವನು ಸಾಯಲೇಬೇಕು ಸತ್ತವನು ಮತ್ತೆ ಜನಿಸಲೇಬೇಕು ಎಂದು ಗೀತೆಯಲ್ಲಿ ಹೇಳಲಾಗಿದೆ ಅಲ್ಲವೇ!?

**ಜಾತಸ್ಯ ಹಿ ಧೃವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ।**

**ತಸ್ಮಾದ ಪರಿಹಾರ್ಯೇರ್ಥೆ ನ ತ್ವಮ್ ಶೋಚಿತು ಮರ್ಹಸಿ ॥(ಭ. ಗೀ.2–27)**

ತಾ :–ಯಾವ ವಿಧವಾಗಿ ನೋಡಿದರೂ ಜನಿಸಿದವನಿಗೆ ಸಾವು ತಪ್ಪುವುದಿಲ್ಲ ಸತ್ತವನಿಗೆ ಜನಿಸುವುದು ತಪ್ಪುವುದಿಲ್ಲ ಅನಿವಾರ್ಯವಾಗಿ ಈ ವಿಷಯದ ಕುರಿತು ನೀವು ಶೋಕಿಸುವುದು ಸರಿಯಲ್ಲ.

ಯಾವುದಕ್ಕೆ ನಿವಾರಣೋಪಾಯ ಇಲ್ಲವೋ, ಅದಕ್ಕಾಗಿ ಏಕೆ ಅಳುತ್ತಿರುವೆ? ಆಧ್ಯಾತ್ಮಿಕತೆ ಎಂದರೆ ಸತ್ಯವನ್ನು ಯಾವಾಗಲೂ ನೆನಪಿಸಿಕೊಳ್ಳುವುದು. ಹುಟ್ಟಿದವನು ಸಾಯದೆಯೇ ಇರುವುದಿಲ್ಲ ಎಂಬ ವಿಷಯ ಎಲ್ಲರಿಗೂ ಗೊತ್ತು.ಆದರೆ ಸತ್ತವನು ಮತ್ತೆ ಹುಟ್ಟುತ್ತಾನೆ ಎನ್ನುವುದು ದೊಡ್ಡ ಆಧ್ಯಾತ್ಮಿಕ ಸತ್ಯ ಗ್ರಂಥಗಳ ಕುರಿತಾಗಿ, ಋಷಿಗಳ ಕುರಿತಾಗಿ, ಯೋಗಿಗಳ ಕುರಿತಾಗಿ ನಾವು ನಂಬಿಕೆ ಇಡಬೇಕು.

ಪತ್ರೀಜಿ ಏನು ಹೇಳಿದ್ದಾರೆ ಎಂದರೆ ಎಷ್ಟು ಜನ್ಮಗಳಿದ್ದರೂ ಎಲ್ಲರೂ ಅಸತ್ಯದಲ್ಲೇ ಜೀವಿಸುತ್ತಿದ್ದಾರೆ ಹಾಗೆ ಎಷ್ಟು ಜನ್ಮಗಳು ತೆಗೆದುಕೊಳ್ಳಬೇಕು ಯಾರಾದರೂ ಸರಿಯೇ ಸತ್ಯದಲ್ಲಿ ಜೀವಿಸಿದರೆ ಏನು ಮೋಕ್ಷ ಎನ್ನುತ್ತಾರೆ ಅದಕ್ಕೆ ಅವರು ಅಸಾತ್ಯವಾದ ವಿಗ್ರಹ ಆರಾಧನೆ ಬೇಡ ಸತ್ಯವಾದ ಆತ್ಮವನ್ನೇ ಧ್ಯಾನದಿಂದ ಆರಾಧಿಸಿ ಎಂದು ಹೇಳುತ್ತಾರೆ.

ಅಷ್ಟೇ ಅಲ್ಲ ಸತ್ಯವನ್ನು ತಿಳಿದುಕೊಳ್ಳಬಲ್ಲ ಸತ್ಯದಲ್ಲಿ ಜೀವಿಸಬಲ್ಲ ಜನ್ಮ ಉನ್ನತವಾದದ್ದು ಇಂದು ಪತ್ರೀಜಿ ಹೇಳಿದ್ದಾರೆ

ಆದ್ದರಿಂದ ಸತ್ಯವನ್ನು ಅಂದರೆ ಆತ್ಮವನ್ನು ಆಶ್ರಯಿಸೋಣ ಆ ಮಾರ್ಗವೇ ಪತ್ರಿ ನಮಗೆಲ್ಲರಿಗೂ ನೀಡಿದ ಶ್ವಾಸದ ಮೇಲೆ ಗಮನ ಧ್ಯಾನ

ಸತ್ಯಜೀವಿತದ ಒಂದು ಪರಿಣಾಮ ಅಮೃತಮಯವಾಗಿ ಪರಿಣಮಿಸುತ್ತದೆ. ಅಸತ್ಯ ಜೀವನದ ಪರಿಣಾಮ ವಿಷಭೂಯಿಷ್ಟವಾಗಿ ಪರಿಣಮಿಸುತ್ತದೆ, ಎಂದು ಮರೆಯಬಾರದು.

# ಶ್ರೀ ರಾಮಧಾಮ ಧ್ಯಾನಕೇಂದ್ರ

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066.
ಸಂಪರ್ಕಿಸಿ : ಹೆಚ್. ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮೀ ಎಸ್.ಎನ್. 80500 82689

## ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಅಹಿಂಸೆ & ಶಾಖಾಹಾರ | ರೂ. 20 |
| 2. | ನವವಿಧ ಧರ್ಮಗಳು | ರೂ. 40 |
| 3. | ಸಸ್ಯಾಹಾರವೇ ಮಾನವಾಹಾರ | ರೂ. 20 |
| 4. | ಧ್ಯಾನ | ರೂ. 60 |
| 5. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. 30 |
| 6. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. 30 |
| 7. | ಶಿರಿಡಿ ಸಾಯಿ ಸಂದೇಶಗಳು | ರೂ. 30 |
| 8. | ಪ್ರಾಣ ಶಕ್ತಿ | ರೂ. 100 |
| 9. | ಜೀವನದ ಸೂಕ್ಷ್ಮಗಳು | ರೂ. 60 |
| 10. | ವಿದ್ಯಾರ್ಥಿ ಜೀವನ ಕ್ರಾಂತಿ | ರೂ. 40 |
| 11. | ಸಂಘಂ ಶರಣಂ ಗಚ್ಛಾಮಿ | ರೂ. 300 |
| 12. | ತುಳಸಿ ದಳ (I) | ರೂ. 200 |
| 13. | ತುಳಸಿ ದಳ (ii) | ರೂ. 220 |
| 14. | ಆಶ್ಚರ್ಯ....ಆಶ್ಚರ್ಯ | ರೂ. 40 |
| 15. | ದುಃಖ ನಿವಾರಣೆಯ ಮಾರ್ಗ | ರೂ. 70 |
| 16. | ಧ್ಯಾನದಿಂದಲೇ ಜ್ಞಾನ | ರೂ. 70 |
| 17. | ಬ್ರಹ್ಮಜ್ಞಾನ | ರೂ. 70 |
| 18. | ಜ್ಞಾನ ಜ್ಯೋತಿ | ರೂ. 90 |
| 19. | ಗೈಡಿಂಗ್ | ರೂ. 100 |
| 20. | ಸಂಕಲ್ಪವೆಂದರೇನು? | ರೂ. 50 |
| 21. | ಕರ್ಮ ಸಿದ್ಧಾಂತ | ರೂ. 70 |
| 22. | ಜ್ಞಾನ ಕುಸುಮಗಳು | ರೂ. 90 |
| 23. | ಆಲೋಚನಾ ಶಕ್ತಿ | ರೂ. 40 |
| 24. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. 40 |
| 25. | ಆಧ್ಯಾತ್ಮಿಕ ಶಾಸ್ತ್ರ | ರೂ. 40 |
| 26. | ಭಕ್ತಿ ಮುಕ್ತಿ | ರೂ. 30 |
| 27. | ಧ್ಯಾನ ತರಂಗ | ರೂ. 40 |
| 28. | ಜ್ಞಾನ ಯುಗ | ರೂ. 60 |
| 29. | ಸೇತು ವಿಜ್ಞಾನ | ರೂ. 40 |
| 30. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ. 130 |
| 31. | ಅತೀಂದ್ರಿಯ ಶಕ್ತಿಗಳು | ರೂ. 40 |
| 32. | ನಾವು ಇಹಲೋಕ ವಾಸಿಗಳಾ? ಪರಲೋಕ ವಾಸಿಗಳಾ? | ರೂ. 40 |
| 33. | ಆಲೋಚಿಸಿ | ರೂ. 70 |
| 34. | ನಿರ್ವಾಣ ಮಾರ್ಗ | ರೂ. 60 |
| 35. | ಸತ್ಯ | ರೂ. 40 |
| 36. | ಆರ್ಥಿಕ ಪರಿಸ್ಥಿತಿ | ರೂ. 40 |
| 37. | ಚಕ್ರಗಳು | ರೂ. 30 |
| 38. | ಭೂತದಯೆ ಮತ್ತು ದೈವತ್ವ | ರೂ. 80 |

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

## ಧ್ಯಾನವನ್ನು ಯಾರಾದರೂ ಮಾಡಬಹುದು
## ಯಾವ ವಯಸ್ಸಿನವರಾದರೂ ಮಾಡಬಹುದು
## ಯಾವ ಸಮಯದಲ್ಲಿಯಾದರೂ ಮಾಡಬಹುದು
## ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

**ಬ್ಯಾಂಕ್ ಹೆಸರು : ಭಾರತೀಯ ಸ್ಟೇಟ್ ಬ್ಯಾಂಕ್ – State Bank of India**
**ಶಾಖೆಯ ಹೆಸರು : ಚಾಮರಾಜಪೇಟೆ ಶಾಖೆ – Chamarajapete Branch**
**ಖಾತೆ ಸಂಖ್ಯೆ : 30828057680 : I.F.S.C. ಕೋಡ್ – S.B.I.N 0005794**
**ಖಾತೆಯ ಹೆಸರು : ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ – K.P.D.P. Trust A/c. Dhayana Kasturi**

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



1. ಸೃಷ್ಟಿ ಆದಿಯಲ್ಲಿ ಇರುವುದು ಸತ್ಯವೇ ಸೃಷ್ಟಿಯ ಅಂತ್ಯದಲ್ಲಿ ಇರುವುದು ಸತ್ಯವೇ.
2. ಈ ಸೃಷ್ಟಿ ಎಲ್ಲದಕ್ಕೂ ಮೂಲ ಸತ್ಯವೇ.
3. ಸತ್ಯವೇ ಎಲ್ಲದಕ್ಕೂ ಆಧಾರ.
4. ಸತ್ಯದಿಂದಲೇ ಎಲ್ಲವುಗಳ ಇರುವಿಕೆ.
5. ಜಾಗ್ರತೆ ಎಂದರೆ ಎಚ್ಚರ., ಸ್ವಪ್ನ ಎಂದರೆ ಕನಸು, ಸುಷುಪ್ತಿ ಎಂದರೆ ಗಾಢ ನಿದ್ರೆ. ಈ ಮೂರು ಹಂತಗಳಿಗೂ ಸಾಕ್ಷಿಯಾಗಿ ಇರುವುದು ಸತ್ಯ.
6. ಅಹಂ ಎಂದರೆ ನಾನು ಎನ್ನುವ ಜ್ಞಾನಕ್ಕೆ ಸತ್ಯವೇ ಆಧಾರವಾಗಿದೆ.
7. ಸತ್ಯವೇ ಜ್ಞಾನವು ಅಂದರೆ ಆನಂದ.
8. ಸತ್ಯವೇ ಜ್ಞಾನವು ಅಂದರೆ ಜ್ಞಾನ ಸ್ವರೂಪ.
9. ಎಲ್ಲಾ ಇಂದ್ರಿಯಗಳು ಮಾಡುವ ಕೆಲಸಗಳಿಗೆ ಕಾರಣ ಸತ್ಯ.
10. ಪುರುಷ ಪ್ರಕೃತಿಗಳ ಐಕ್ಯ ಸ್ವರೂಪವು ಕೂಡ ಸತ್ಯವೇ.
11. ಸತ್ಯವು ದ್ರಷ್ಟ, ಅಂದರೆ ನೋಡುವುದು..... ಅಷ್ಟೇ ಹೊರತು ದೃಶ್ಯವಲ್ಲ ಅಂದರೆ ಕಾಣಿಸುವುದಿಲ್ಲ.
12. ಸತ್ಯವು ಇದೆ ಎಂದು ಮಾತ್ರವೇ ತಿಳಿದುಕೊಳ್ಳ ಬಲ್ಲೆವು ಹೀಗೆ ಇರುತ್ತದೆ ಎಂದು ಹೇಳಲಾರದ, ಎಲ್ಲಾ ಕಡೆ ಇರುವ ಆದಿ ಅಂತ್ಯ ಇಲ್ಲದ ಮಹಾಕಾಂತಿಮಯ ಶಕ್ತಿ, ಅದೇ ಪರಮಾತ್ಮ.

ರೂ 40/-


ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada ● www.meditationeverywhere.org ● www.pssmovement.org

ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689